ಐಕ್ಯರಂಗ

(ವಾರ ಪತ್ರಿಕೆ)

ಸಂಪುಟ 5 | ಸಂಚಿಕೆ 24 | ಜೂನ್ 12, 1983 | ಬೆಲೆ 60 ಪೈಸೆ

ವಿಜಯವಾಡ ಸಮಾವೇಶ - ಮಹತ್ವದ ಹೆಜ್ಜೆ

ದೇಶದಲ್ಲಿ ಅತಿ ದೊಡ್ಡ ರಾಜಕೀಯ ಪಕ್ಷವಾದ ಕಾಂಗ್ರೆಸ್ಸಿನ ಅಧ್ಯಕ್ಷರೂ, ದೇಶದ ಪ್ರಧಾನ ಮಂತ್ರಿಯವರೂ ಆದ ಇಂದಿರಾಗಾಂಧಿಯವರಿಗೆ ತನ್ನ ನಾಲಿಗೆಯ ಚಟವನ್ನು ಪೂರೈಸಿಕೊಳ್ಳಲು ಒಳ್ಳೆ ಅವಕಾಶ ಮಾಡಿಕೊಡುವಂಥ ಒಂದು ಸಮಾವೇಶ ಮೇ 28ರಂದು ವಿಜಯವಾಡದಲ್ಲಿ ಸೇರಿತ್ತು. ಇಂದಿನ ದೇಶದ ರಾಜಕೀಯದ ಮೇಲೆ ವಿಜಯವಾಡದಲ್ಲಿ ನೆರೆದಿದ್ದ ವಿಭಿನ್ನ ವಿರೋಧ ಪಕ್ಷಗಳ ಮುಖಂಡರೊಳಗೆ ನಡೆದ ವಿಚಾರ ವಿನಿಮಯ ಎಂಥ ಪರಿಣಾಮ ಬೀರುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ದೇಶ ಹಾಗೂ ಜನತೆ ಎದುರಿಸುತ್ತಿರುವ ಕೆಲವು ಮಹತ್ತರವಾದ ಸಮಸ್ಯೆಗಳ ಕುರಿತು ಮೂಲಭೂತವಾದ ರಾಜಕೀಯ ಭಿನ್ನಾಭಿಪ್ರಾಯ ಇರುವ ಪಕ್ಷಗಳು ಒಮ್ಮತದ ನಿರ್ಣಯಕ್ಕೆ ಬರಲು ಸಾಧ್ಯವಿದೆ ಎಂಬ ಸಂಗತಿ ಸಮಾವೇಶದ ಕೊನೆಯಲ್ಲಿ ಹೊರಡಿಸಲಾದ ಪ್ರಕಟಣೆಯಿಂದ ಕಂಡು ಬರುತ್ತದೆ.

ದಕ್ಷಿಣ ಭಾರತದ ಭದ್ರಕೋಟೆಗಳಾದ ಕರ್ನಾಟಕ-ಆಂಧ್ರ ರಾಜ್ಯಗಳಲ್ಲಿ ವಿರೋಧ ಪಕ್ಷಗಳ ಸರಕಾರ ಅಧಿಕಾರಕ್ಕೆ ಬಂದಿರುವುದರಿಂದ, ತಮಿಳುನಾಡು, ಪಾಂಡಿಚೇರಿ, ಕಾಶ್ಮೀರದಂಥ ಕಾಂಗ್ರೆಸ್ ವಿರೋಧಿ ಸರ್ಕಾರಗಳು ಕೇಂದ್ರದ ಇಂದಿರಾ ಸರಕಾರದ ಕುರಿತು ಡೋಲಾಯಮಾನ ನಿಲುವು ತಾಳುವುದಕ್ಕೆ ಸ್ವಲ್ಪಮಟ್ಟಿಗೆ ಪೂರ್ಣವಿರಾಮ ಹಾಕಲು, ರಾಜ್ಯಗಳ ಸ್ವಾಯತ್ತತೆಯ ಸಲುವಾಗಿ ನಿರ್ದಿಷ್ಟ ನಿಲುವು ತಳೆಯಲು ಹೆಚ್ಚಿನ ಸಹಕಾರಿಯಾಗಿದೆ. ಈ ಕಾರಣದಿಂದಲೇ ಮಾರ್ಚ್ ತಿಂಗಳಲ್ಲಿ ಕರ್ನಾಟಕದ ಮುಖ್ಯಮಂತ್ರಿ ರಾಮಕೃಷ್ಣ ಹೆಗ್ಗಡೆಯವರ ಆಹ್ವಾನದ ಮೇರೆಗೆ ಆಂಧ್ರ, ತಮಿಳುನಾಡು, ಪುದಿಚೇರಿ, ಮುಖ್ಯಮಂತ್ರಿಗಳ ಸಭೆ ಬೆಂಗಳೂರಿನಲ್ಲಿ ಸೇರಿತ್ತು. ಇದರ ಪರಿಣಾಮವಾಗಿ ಒಲ್ಲದ ಮನಸ್ಸಿನಿಂದ ಇಂದಿರಾ ಗಾಂಧಿಯವರು ಕೇಂದ್ರ-ರಾಜ್ಯಗಳ ಸಂಬಂಧದ ಕುರಿತು ವರದಿ ಸಲ್ಲಿಸಲು ಸರ್ಕಾರಿಯಾ ಸಮಿತಿ ನೇಮಿಸಿದರು. ಕೇಂದ್ರದ ಸಹಾಯವಿಲ್ಲದೆ ಎರಡು ರಾಜ್ಯಗಳೊಳಗಿನ ಸಮಸ್ಯೆಗಳನ್ನು ತಂತಮ್ಮೊಳಗೆ ಚರ್ಚಿಸಿ ಬಗೆಹರಿಸಿಕೊಳ್ಳುವ ನಿರ್ಧಾರ ಮಾಡಿ ಕೃಷ್ಣೆಯ ನೀರನ್ನು ಮದ್ರಾಸಿಗೆ ಒದಗಿಸುವ ಯೋಜನೆಯ ಒಪ್ಪಂದಕ್ಕೆ ಆಂಧ್ರ-ತಮಿಳುನಾಡು ಸರ್ಕಾರಗಳು ಸಹಿ ಹಾಕಿ ಆಂಧ್ರ ಮುಖ್ಯಮಂತ್ರಿ ರಾಮರಾವ್ ಅವರು 30 ಕೋಟಿಯನ್ನು ತಮಿಳುನಾಡು ಮುಖ್ಯಮಂತ್ರಿ ರಾಮಚಂದ್ರನ್ ಅವರಿಗೆ ಅರ್ಪಿಸುವಂತಾಯಿತು. ಈ ಧೋರಣೆಯನ್ನೇ ಮುಂದುವರಿಸುತ್ತಾ ತೆಲುಗು ದೇಶಂ ಪಕ್ಷದ ಅಧಿವೇಶನದ ಸಂದರ್ಭದಲ್ಲಿ ದೇಶದಲ್ಲಿರುವ ಎಲ್ಲ ವಿರೋಧ ಪಕ್ಷಗಳ ಸರ್ಕಾರಗಳ ಮುಖ್ಯಮಂತ್ರಿಗಳ, ವಿರೋಧ ಪಕ್ಷಗಳ ಮುಖಂಡರ ಸಭೆಯನ್ನು ಎನ್. ಟಿ. ರಾಮರಾವ್ ಕರೆದು ಹೊಸ ಪರಂಪರೆಯನ್ನು ಸ್ಥಾಪಿಸುವಂತಾಗಿದೆ. "ತನ್ನನ್ನು ಅಧಿಕಾರದಿಂದ ಕಿತ್ತೆಸೆಯುವ, ದೇಶವನ್ನು ವಿಭಜಿಸುವ ಒಳಸಂಚೆಂದು" ಈ ಸಮಾವೇಶದ ಕುರಿತು ಇಂದಿರಾಗಾಂಧಿಯವರೂ ಅವರ ಬಡಾ-ಛೋಟಾ ಚೇಲಾಗಳೆಲ್ಲ ಬೊಬ್ಬಿಟ್ಟುಕೊಳ್ಳುವಂತಾಗಿದೆ.

ಈ ಸಮಾವೇಶದಲ್ಲಿ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳಾದ ಎನ್. ಟಿ. ರಾಮರಾವ್, ಎಂ. ಜಿ. ರಾಮಚಂದ್ರನ್, ರಾಮಕೃಷ್ಣ ಹೆಗಡೆ ಮತ್ತು ಡಾ। ಫರೂಕ್ ಅಬ್ದುಲ್ಲಾ ಇವರಲ್ಲದೆ ಈ ನಾಲ್ಕು ರಾಜ್ಯಗಳ ಕೆಲವು ಮಂತ್ರಿಗಳೂ ಪಾಲ್ಗೊಂಡಿದ್ದರು. ತೆಲುಗು ದೇಶಂ ಪ್ರಧಾನ ಕಾರ್ಯದರ್ಶಿ ಪಿ. ಉಪೇಂದ್ರ, ಅಕಾಲಿ ದಳದ ಬರ್ನಾಲ, ಖೈರಾ, ಬಿ. ಜೆ. ಪಿ.ಯ ಅಡ್ವಾನಿ, ಜನತಾ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ರವೀಂದ್ರ ವರ್ಮಾ, ಕಾಂಗ್ರೆಸ್ (ಎಸ್)ನ ಶರದ್‌ಪವಾರ್, ಉನ್ನಿಕೃಷ್ಣನ್, ಡಿ. ಎಸ್. ಪಿ.ಯ ಬಹುಗುಣ, ರಘುನಾಥರೆಡ್ಡಿ, ಲೋಕದಳದ ಎಸ್. ಎನ್. ಮಿಶ್ರಾ, ಗುಜರಾತಿನ ರಾಷ್ಟ್ರೀಯ ಕಾಂಗ್ರೆಸ್ಸಿನ ರಥುಭಾಯಿ ಅದಾನಿ, ಸಂಜಯ ವಿಚಾರ ಮಂಚದ ಮೇನಕಾಗಾಂಧಿ, ಸಿ. ಪಿ. ಐ. ಪ್ರಧಾನ ಕಾರ್ಯದರ್ಶಿ ರಾಜೇಶ್ವರರಾವ್, ಸಿ.ಪಿ.ಐ.(ಎಂ) ಪಾಲಿಟ್‌ಬ್ಯೂರೋ ಸದಸ್ಯ ಬಸವಪುನ್ನಯ್ಯ ಇವರು ಸಭೆಗೆ ಬಂದಿದ್ದರು.

ಇಡೀ ದಿವಸದ ವಿಚಾರ ವಿನಿಮಯದ ನಂತರ ಎಲ್ಲರ ಒಪ್ಪಿಗೆಯಿಂದ ಪ್ರಕಟನೆಯೊಂದನ್ನು ಹೊರಡಿಸಲಾಯಿತು. ಅದರ ಮುಖ್ಯಾಂಶಗಳು ಹೀಗಿವೆ.

ಈ ಹೊತ್ತಿನ ಸಭೆಯ ಮಹತ್ವ ಹಾಗೂ ಅದರ ಮೌಲ್ಯದ ಕುರಿತು ಇಲ್ಲಿ ನೆರೆದಿರುವ ಎಲ್ಲ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಸರ್ವಾನುಮತದ ಏಕ ಅಭಿಪ್ರಾಯವನ್ನು ಹೊಂದಿವೆ. ದೇಶದ ಅತಿ ಮಹತ್ವದ ರಾಷ್ಟ್ರೀಯ ಸಮಸ್ಯೆಯ ಕುರಿತು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಈ ಸಮಾವೇಶ ಆಂಧ್ರದ ಮುಖ್ಯಮಂತ್ರಿ ಎನ್. ಟಿ. ರಾಮರಾವ್ ಅವರಿಗೆ ಅಭಿನಂದನೆ ಸಲ್ಲಿಸುತ್ತದೆ. ದೇಶ ಸ್ವಾತಂತ್ರ್ಯಗಳಿಸಿದ ನಂತರದ ಕಳೆದ ಮೂರೂವರೆ ದಶಕಗಳಲ್ಲಿ ಕಾಣದಂಥ ಅಪಾಯವನ್ನು ದೇಶದ ಐಕ್ಯತೆ ಹಾಗೂ ನಿಷ್ಠೆ ಇಂದು ಕಾಣುತ್ತಿದೆಂದು ಸಮಾವೇಶ ಅಭಿಪ್ರಾಯಪಡುತ್ತದೆ. ಜನತೆ ಹಾಗೂ ಕೆಲವು ಪ್ರದೇಶಗಳು ಎದುರಿಸುತ್ತಿರುವ ತುರ್ತಿನ ಸಮಸ್ಯೆಗಳಿಗೆ ಒಪ್ಪಿಗೆಯಾಗುವ ಪರಿಹಾರಗಳನ್ನು ಸಕಾಲದಲ್ಲಿ ಕಂಡು ಹಿಡಿಯಲು ಕೇಂದ್ರ ಸರ್ಕಾರ ತಪ್ಪಿರುವುದರಿಂದಲೇ ರಾಷ್ಟ್ರದ ಒಗ್ಗಟ್ಟು ಮತ್ತು ನಿಷ್ಠೆಗೆ ಅಪಾಯ ಉಂಟಾಗಿದೆ. ಇಷ್ಟೇ ಅಲ್ಲದೆ, ಮುಖ್ಯಮಂತ್ರಿಯವರ ಹಾಗೆಯೇ ಆಳುವ ಪಕ್ಷದ ಕೆಲವು ಮುಖಂಡರ ಹೇಳಿಕೆಗಳು, ಜಾತೀಯ, ಮತೀಯ ಶಕ್ತಿಗಳು, ಛಿದ್ರಕಾರಿ ಗುಂಪುಗಳೆಲ್ಲ ಐಕ್ಯತೆಯನ್ನು ಛಿದ್ರಗೊಳಿಸುತ್ತಿರುವುದಕ್ಕೆ ಈ ಸಭೆ ಚಿಂತೆ ವ್ಯಕ್ತಮಾಡುತ್ತದೆ.

"ವಿರೋಧ ಪಕ್ಷ"ಗಳಿರುವುದರಿಂದಲೇ ಇಂಥ ಪರಿಸ್ಥಿತಿ ಉಂಟಾಗಿದೆ ಎಂದು ಇಂದಿರಾಗಾಂಧಿ ಆರೋಪ ಹೊರಿಸುತ್ತಿರುವುದು ಬೇಜವಾಬ್ದಾರಿಯುತವಾಗಿದೆ.

ದೇಶವನ್ನು ಆಳುತ್ತಿರುವುದರಲ್ಲಿ ಹಾಗೆಯೇ ಸಾರ್ವಜನಿಕ ಜೀವನದಲ್ಲಿ

(8ನೇ ಪುಟ ನೋಡಿ)

ಸಂಪಾದಕೀಯ

ಅಧಿಕಾರ ಇಂದಿರಾಗಾಂಧಿಯ ಗುತ್ತಿಗೆಯೇ?

"ದೇಶದ ಜನತೆ ಎದುರಿಸುತ್ತಿರುವ ಸಮಸ್ಯೆಗಳ ಪರಿಹಾರಕ್ಕೆ ಗಮನ ಹರಿಸದೆ ನನ್ನನ್ನು ಅಧಿಕಾರದಿಂದ ಹೇಗೆ ಕಿತ್ತೊಗೆಯಬೇಕೆಂಬುದರ ಕುರಿತು ವಿರೋಧ ಪಕ್ಷಗಳು ಹೆಚ್ಚು ಚಿಂತೆಗೊಳಗಾಗಿದ್ದಾರೆ" ಎಂದು ಇಂದಿರಾ ಗಾಂಧಿಯವರು ಆರೋಪಿಸಿದ್ದಾರೆ. ಸಂದರ್ಭ-ಕಾಶ್ಮೀರದಲ್ಲಿ ಚುನಾವಣೆಯ ಪ್ರಚಾರ ಸಭೆ. ಅವರು ಅಭಿಪ್ರಾಯ ವ್ಯಕ್ತಮಾಡಲು ಪ್ರಚೋದನೆ ಕೊಟ್ಟಿರುವುದು ಎನ್. ಟಿ. ರಾಮರಾವ್ ಅವರು ವಿಜಯವಾಡದಲ್ಲಿ ಕಳೆದ ಎಲ್ಲ ವಿರೋಧ ಪಕ್ಷಗಳ ಹಾಗೂ ಕಾಂಗ್ರೆಸ್ ವಿರೋಧ ಪಕ್ಷಗಳ ಮುಖ್ಯಮಂತ್ರಿಗಳ ಸಭೆ ಮತ್ತು ಅದರ ನಿರ್ಣಯ.

ನೆಹರೂ ಮನೆತನಕ್ಕಾಗಲೀ, ಇಂದಿರಾಗಾಂಧಿಗಾಗಲೀ, ಭಾರತ ದೇಶದಲ್ಲಿ ಅಧಿಕಾರ ಚಲಾಯಿಸುವ ಗುತ್ತಿಗೆ ಕೊಡಲಾಗಿದೆಯೋ ಎಂಬ ಸಂಶಯ ಇಂದಿರಾ ಗಾಂಧಿಯವರ ಮೇಲಿನ ಹೇಳಿಕೆಯಿಂದ ಕಂಡು ಬರುತ್ತದೆ.

ಅಧಿಕಾರ ಪಡೆಯುವ ಸಲುವಾಗಿ, ಅಧಿಕಾರ ನಡೆಸುವ ಸಲುವಾಗಿ ರಾಜಕೀಯ ಪಕ್ಷಗಳು ಹುಟ್ಟಿಕೊಂಡಿರುತ್ತವೆ. ಕೆಲವರು ಸಶಸ್ತ್ರ ಕ್ರಾಂತಿಯಿಂದ, ಕೆಲವರು ಸೈನ್ಯದ ಬಲದಿಂದ ಇನ್ನೂ ಕೆಲವರು ಚುನಾವಣೆಯ ಮೂಲಕ ಅಧಿಕಾರದಲ್ಲಿದ್ದವರನ್ನು ಸೋಲಿಸಿ ತಾವು ಅಧಿಕಾರಕ್ಕೆ ಬರುತ್ತಾರೆ. ಜಗತ್ತಿನ ಪ್ರತಿಯೊಂದು ದೇಶದಲ್ಲಿಯೂ ನಡೆಯುತ್ತಿರುವ ಘಟನೆಗಳಿವು. ನಮ್ಮ ದೇಶದಲ್ಲಿ ನಡೆದ ಪ್ರಥಮ ಚುನಾವಣೆಯಿಂದಲೂ ಒಂದಲ್ಲೊಂದು ರಾಜ್ಯದಲ್ಲಿ ಹಾಗೆಯೇ 1977ರಲ್ಲಿ ಕೇಂದ್ರದಲ್ಲಿ ಕೂಡ ಕಾಂಗ್ರೆಸ್ಸನ್ನು ಸೋಲಿಸಿ ವಿರೋಧ ಪಕ್ಷಗಳು ಅಧಿಕಾರಕ್ಕೆ ಬಂದಿವೆ. ಆದ್ದರಿಂದ ಇಂದಿರಾಗಾಂಧಿಯವರನ್ನು ಅಧಿಕಾರದಿಂದ ಕೆಳಗಿಳಿಸುವುದು ತಪ್ಪೆ? ಇಡೀ ದೇಶವನ್ನೇ ಆರ್ಥಿಕ ಮುಗ್ಗಟ್ಟಿಗೊಳಪಡಿಸಿ, ಜಾತಿ ಮತ್ತು ವಿಚ್ಛಿದ್ರಕಾರಿ ಶಕ್ತಿಗಳಿಗೆ ಪ್ರೋತ್ಸಾಹ ನೀಡಿ ದೇಶದ ಐಕ್ಯತೆಯನ್ನು ಪುಡಿ ಪುಡಿ ಮಾಡಲು ಹೊರಟಿರುವ ಇಂದಿರಾಗಾಂಧಿಯನ್ನು ಅಧಿಕಾರದಿಂದ ಕಿತ್ತೊಗೆಯುವುದರ ಸಲುವಾಗಿ ವಿರೋಧ ಪಕ್ಷಗಳು ವಿಚಾರ ವಿನಿಮಯ ಮಾಡುವುದು ಪಾಪವೇ? ಆ ರೀತಿ ಮಾಡಲು ಅವರಿಗೆ ಹಕ್ಕಿಲ್ಲವೇ? ಎಲ್ಲ ವಿರೋಧ ಪಕ್ಷಗಳು ಒಂದೆಡೆ ಸೇರಿದ್ದಾರೆಂಬುದನ್ನು ಕೇಳಿ ಎದೆ ಬಡಿದುಕೊಳ್ಳುವುದು, ಅಂಜುವುದು, ಚೀರಾಡುವುದು ಯಾಕೆ?

ಅದೇ ವೇದಿಕೆಯಲ್ಲಿ ಮತ್ತೂ ಏನು ಹೇಳುತ್ತಾರೆಂದರೆ ತಾನು ಅಧಿಕಾರದಲ್ಲಿದ್ದರೂ ಅಷ್ಟೇ, ಇಲ್ಲದಿದ್ದರೂ ಅಷ್ಟೇ, ಆದರೆ ತನ್ನನ್ನು ಕಿತ್ತೊಗೆಯುವುದರಿಂದ ದೇಶದ ಸಮಗ್ರತೆ ಮತ್ತು ಐಕ್ಯತೆ ಬಲಿಷ್ಠವಾಗಲು ಸಾಧ್ಯವೇ ಎಂಬ ಪ್ರಶ್ನೆಯನ್ನೂ ಕೇಳಿದ್ದಾರೆ. ಇಂದಿರಾಗಾಂಧಿಯವರ ಹಿಂದಿನ 13 ವರ್ಷಗಳ ಆಡಳಿತೆಯ ವೈಖರಿಯನ್ನು ಪುನರ್ವಿಮರ್ಶಿಸಲು ಕಾಲಾವಕಾಶವಿಲ್ಲದಿದ್ದರೂ, 1980 ರಿಂದೀಚೆಗೆ ಅಸ್ಸಾಂ, ಪಂಜಾಬ್ ಸಮಸ್ಯೆಗಳನ್ನು ಅವರು ಯಾವ ರೀತಿ ನೋಡುತ್ತಿದ್ದಾರೆ, ಪರಿಹಾರ ಒದಗಿಸುತ್ತಿದ್ದಾರೆಯೇ ಎಂಬ ಸಂಗತಿ ನಮ್ಮ ಕಣ್ಣ ಮುಂದಿರುವಾಗ, ಬ್ರಿಟಿಷರ "ವಿಭಜಿಸಿ ಆಳುವ" ನೀತಿಯನ್ನೇ ಇವರೂ ಅನುಸರಿಸುತ್ತಿದ್ದಾರೆಂದೂ, ತನ್ನ ಅಧಿಕಾರ ಉಳಿಸಿಕೊಳ್ಳುವ ದುರುದ್ದೇಶದಿಂದಲೇ ಒಂದು ಜಾತಿ, ಮತ, ಧರ್ಮವನ್ನು ಮತ್ತೊಂದರ ವಿರುದ್ಧ ಎತ್ತಿ ಕಟ್ಟುತ್ತಿದ್ದಾರೆಂದೂ ಯಾವ ಅನುಮಾನ ನಾಚಿಕೆ ಇಲ್ಲದೇ ಈ ಅಸ್ತ್ರವನ್ನು ಉಪಯೋಗಿಸುತ್ತಿದ್ದಾರೆಂದೂ ಎದ್ದು ಕಾಣುವ ಚಿತ್ರವಾಗಿದೆ. ಹಾಗಿರುವಾಗ ಇಂದಿರಾ ಗಾಂಧಿಯ ಪತನ, ಛಿದ್ರಕಾರಿ, ಜಾತೀಯ, ಮತೀಯ ಶಕ್ತಿಗಳ ಅಳಿವಿಗೆ ಕಾರಣವಾಗುತ್ತಲ್ಲದೆ ಉಳಿವಿಗಲ್ಲೆಂಬುದು ಸ್ಪಷ್ಟವಾಗುತ್ತದೆ.

ಪ್ರಜಾಪ್ರಭುತ್ವ ರೀತಿಯಲ್ಲಿ ಆರಿಸಿ ಬಂದ ವಿರೋಧ ಪಕ್ಷಗಳ ಯಾವ ಸರಕಾರವನ್ನಾಗಲೀ ತಾನು ಕಿತ್ತೊಗೆಯಲಿಲ್ಲೆಂದೂ, ಯಾವಾಗಲೂ ಜನರ ಅಭಿಪ್ರಾಯಕ್ಕೆ ಮಾನ್ಯತೆ ಕೊಟ್ಟಿದ್ದೇನೆಂದೂ ಹೇಳಿದ್ದಾರೆ. 1957ರ ಕೇರಳದಲ್ಲಿ ಇ. ಎಂ. ಎಸ್. ನಂಬೂದಿರಿಪಾಡ್ ಅವರ ನೇತೃತ್ವದ ಕಮ್ಯೂನಿಸ್ಟ್ ಸರಕಾರವನ್ನೊಳಗೊಂಡು, ಪ. ಬಂಗಾಲ, ಮತ್ತಿನ್ನಿತರ ರಾಜ್ಯಗಳಲ್ಲಿ ಆರಿಸಿ ಬಂದಿರುವ ಸರಕಾರಗಳನ್ನೂ 1979ರಲ್ಲಿ ಜನತಾ ಸರಕಾರವನ್ನೂ ಉರುಳಿಸುವಲ್ಲಿ ಇಂದಿರಾ ಗಾಂಧಿ ಅನುಸರಿಸಿದ ನೀತಿಯನ್ನು ಭಾರತದ ಜನ ಇನ್ನೂ ಮರೆತಿಲ್ಲವಲ್ಲ.

ರಾಜ್ಯ ಸರ್ಕಾರಗಳ ಕುರಿತು ಕೇಂದ್ರ ಮಲತಾಯಿ ಧೋರಣೆ ಅನುಸರಿಸುತ್ತಿದ್ದು, ಕೇಂದ್ರ-ರಾಜ್ಯ ಸರಕಾರಗಳ ಸಂಬಂಧದಲ್ಲಿ ಮೂಲ ಬದಲಾವಣೆಯನ್ನು ತರಲು ವಿಶಾಲವಾದ ಸಂಯುಕ್ತ ಹೋರಾಟ ನಡೆಸಬೇಕೆಂದೂ, ಜನರೆದುರಿಸುತ್ತಿರುವ ಸಮಸ್ಯೆಗಳಿಗೆ ಪರಿಹಾರ ಒದಗಿಸುವುದರಲ್ಲಿ ವಿಳಂಬ ನೀತಿಯಿಂದಾಗಿ ಹಲವಾರು ಕಡೆ ವಿಚ್ಛಿದ್ರಕಾರಿ ಶಕ್ತಿಗಳು ದೇಶದ ಐಕ್ಯತೆಗೆ ಭಂಗ ಉಂಟು ಮಾಡುವುದರ ಕುರಿತು ಜನತೆಯಲ್ಲಿ "ಜಾಗೃತಿಯನ್ನುಂಟು ಮಾಡುವ ಉದ್ದೇಶದಿಂದ ಮಾತ್ರ ವಿಜಯವಾಡ ಸಮಾವೇಶ ಸೇರಿರುವುದೆಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳುವುದು ಅಗತ್ಯ. ಹಾಗಿರುವಾಗ ತನ್ನನ್ನು ಅಧಿಕಾರದಿಂದಿಳಿಸಲು ಈ ಸಮಾವೇಶ ಸೇರಿದೆಂದು ಇಂದಿರಾ ಗಾಂಧಿ ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ.

ಕರ್ನಾಟಕ ರಾಜ್ಯದಲ್ಲಿ

ದೊಡ್ಡ ರೈತರ ಸಾಲ ಬಾಕಿ-ಸರ್ಕಾರದ ನೀತಿ

ಜೂನ್ 30ರ ನಂತರವೂ ಬಾಕಿ ಉಳಿಸಿಕೊಳ್ಳುವ ದೊಡ್ಡ ರೈತರಿಂದ ಸಾಲವನ್ನು ಬಲವಂತದಿಂದ ವಸೂಲಿ ಮಾಡಲಾಗುವುದು ಎಂದು ಸಹಕಾರ ಸಚಿವ ಜಾಲಪ್ಪನವರು ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯಲ್ಲಿ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಹೇಳಿದರಂತೆ. ರಿಯಾಯತಿಯೊಂದಿಗೆ ಸಾಲ ಮರುಪಾವತಿಗೆ ನೀಡಿರುವ ಅವಧಿಯನ್ನು ಇನ್ನಷ್ಟು ವಿಸ್ತರಿಸುವುದಿಲ್ಲವೆಂದೂ ಹೇಳಿದ್ದಾರಂತೆ. ಸಾಲ ತೀರಿಸದ ರೈತರನ್ನು ಜೈಲಿಗಟ್ಟಲಾಗುವುದೆಂದು ಹೇಳಿದ್ದಾರೆಂದೂ ಪತ್ರಿಕೆಗಳಲ್ಲಿ ಬಂದಿದ್ದು, ಸಚಿವರು ಅದನ್ನು ಅಲ್ಲಗಳೆದಿದ್ದಾರೆ.

ಇದೇ ಜೂನ್ 30ರೊಳಗಾಗಿ ಸಾಲದ ಅಸಲನ್ನು ಮರು ಪಾವತಿ ಮಾಡಿದರೆ, ಬಡ್ಡಿಯನ್ನೆಲ್ಲ ಮನ್ನಾ ಮಾಡಲಾಗುವುದೆಂದು ರಾಜ್ಯದ ಜನತಾ ಸರಕಾರ ನಿರ್ಣಯ ಮಾಡಿತ್ತು. ಇದರಂತೆ ಜಿಲ್ಲಾ ಸಹಕಾರಿ ಬ್ಯಾಂಕುಗಳೂ, ಪಿ. ಎಲ್. ಡಿ. ಬ್ಯಾಂಕುಗಳೆಲ್ಲ ತಮ್ಮದೇ ಆದ ರೀತಿಯಲ್ಲಿ ಹಣ ವಸೂಲಿ ಕ್ರಮ ಕೈಗೊಂಡಿವೆ.

ಒಂದು ದೃಷ್ಟಿಯಲ್ಲಿ ಸರ್ಕಾರದ ಈ ಕ್ರಮ ಸ್ವಾಗತಾರ್ಹ. ಆದರೆ ಅತೀ ಬಡ ರೈತರಿಗೂ ಹಾಗೆಯೇ ಯಾವಾಗಲೂ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶದ ಬಡ ಮತ್ತು ಮಧ್ಯಮ ರೈತರಿಗೂ ಇನ್ನೂ ಹೆಚ್ಚಿನ ಅನುಕೂಲತೆಗಳನ್ನು ಒದಗಿಸಬೇಕಾಗಿತ್ತು.

ಬಂಡವಾಳಶಾಹಿ ಸಮಾಜದಲ್ಲಿ ಭೂಮಾಲಿಕರ, ಸಿರಿವಂತ ರೈತರ ಹಿಡಿತವೇ ಹೆಚ್ಚಾಗಿರುವ ಸಮಾಜದಲ್ಲಿ ಸರ್ಕಾರ ಕೈಗೊಳ್ಳುವ ಯಾವುದೇ ರಿಯಾಯತಿಯ ಅತಿ ಹೆಚ್ಚಿನ ಲಾಭ ಪಡೆಯುವವರು ಈ ವರ್ಗದ ಜನರೇ. ಕೆಳಮಟ್ಟಕ್ಕೆ ಅದು ತಲುಪುವುದೇ ಇಲ್ಲ.

ಬರಗಾಲ ಪ್ರದೇಶದಲ್ಲಿ ಸಣ್ಣ ಮತ್ತು ಮಧ್ಯಮ ರೈತರಿಗೆ ಈ ಸೌಲಭ್ಯವನ್ನು ಮುಂದಿನ ಜೂನ್ ತಿಂಗಳವರೆಗೆ ಮುಂದುವರಿಸಬೇಕೆಂದು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಹಾಗೂ ರಾಜ್ಯ ಕಿಸಾನ್ ಸಭಾ ಸರ್ಕಾರವನ್ನು ಕೇಳಿಕೊಂಡಿದೆ. ಇನ್ನು ಹಲವಾರು ವರ್ಷಗಳಿಂದ ಒಂದಲ್ಲೊಂದು ನೆವ ಮುಂದೆ ಮಾಡಿ ಸಾಲ ತೀರಿಸಲು ಸಾಧ್ಯತೆ ಇರುವವರೂ ಸಾಲ ತೆರಲು ನಿರಾಕರಿಸುತ್ತಿದ್ದರೆ ಅಂಥವರಿಂದ ಯಾವ ತರದಲ್ಲಿ ಸಾಲ ವಸೂಲಿ ಮಾಡಬೇಕೆಂದು ನಿರ್ಣಯಿಸುವ ಹಕ್ಕು ಸರಕಾರದ್ದು. ಅಂಥವರು ನಂಜುಂಡಸ್ವಾಮಿಯವರ ರೈತ ಸಂಘದಲ್ಲಿದ್ದರೆ ಅಂಥವರ ರಕ್ಷಣೆಗೆ ಅವರು ಧಾವಿಸಬಹುದು. ಆದರೆ ಬಡ, ಮಧ್ಯಮ ರೈತರೆಲ್ಲ ವಿಶಿಷ್ಟ ಪರಿಸ್ಥಿತಿಯಿಂದಾಗಿ ಹಣ ತುಂಬಲು ಸಾಧ್ಯವಾಗದಿದ್ದರೆ ಅಂಥವರಿಗೆ ಕಾಲಾವಕಾಶ ಒದಗಿಸುವುದು ಜನತಾ ಸರ್ಕಾರದ ಕರ್ತವ್ಯ. ಆದರೆ ಈ ಸರ್ಕಾರ ಗುಂಡೂರಾಯರಂತೆ ಗುಂಡು ಹಾರಿಸುವಂಥ ಕ್ರಮ ಕೈಗೊಳ್ಳುವುದಿಲ್ಲವೆಂದು ಆಶಿಸುತ್ತೇವೆ. ಅಂಥ ಗುಂಡು ಮಾತ್ರ ಹಾರಿಸಿದ್ದೇ ಆದರೆ–ಅದು ಯಾರ ಮೇಲಾದರೂ ಆಗಲಿ–ಪ್ರಜ್ಞಾವಂತ ಜನತೆ ಅಂಥ ಕ್ರಮವನ್ನು ವಿರೋಧಿಸಲೇ ಬೇಕಾಗುತ್ತದೆ ಎಂಬುದನ್ನು ನೆನಸಿಕೊಳ್ಳುವುದು ಅಗತ್ಯ. ಮನಸ್ಸಿದ್ದಲ್ಲಿ ಮಾರ್ಗವಿದೆ. ಬಾಕಿ ವಸೂಲಿ ಮಾಡಲು ಸರ್ಕಾರದ ಬತ್ತಳಿಕೆಯಲ್ಲಿ ಸಾಕಷ್ಟು ಅಸ್ತ್ರಗಳಿವೆ. ಆ ಅಸ್ತ್ರಗಳ ಉಪಯೋಗ ಮಾತ್ರ ಬಹಳ ವಿಚಾರದಿಂದಲೇ ಮಾಡಬೇಕು. ಬಡ ಜನರ ಸಾಲ ಮನ್ನಾ ಮಾಡುವ, ಸಿರಿವಂತರನ್ನು ಬಿಟ್ಟು ಇತರರಿಗೆ ಕಾಲಾವಕಾಶ ಒದಗಿಸುವ ನಿರ್ಣಯವನ್ನು ಸರ್ಕಾರ ಕೈಗೊಳ್ಳಲಿ.

ಬಿ. ಡಿ. ಎ. ಹಗರಣ-ವಿಚಾರಣೆ ಅತ್ಯಗತ್ಯ

ಕುಖ್ಯಾತಿ ಪಡೆದಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಜನತಾ ಪಕ್ಷ ಅಧಿಕಾರಕ್ಕೆ ಬಂದ ನಂತರವೂ ಮುಖಪುಟದಲ್ಲಿ ಪ್ರಸಿದ್ಧಿ ಪಡೆಯುತ್ತಿರುವುದನ್ನು ನೋಡುವಾಗ ಅದರಲ್ಲಿ ಪಟ್ಟಭದ್ರ ಹಿತಾಸಕ್ತಿಗಳ ಕೈವಾಡ ಎಷ್ಟು ಆಳವಾಗಿದೆಯೆಂಬುದು ಸ್ಪಷ್ಟವಾಗುತ್ತಿದೆ. ಬಿ.ಡಿ.ಎ.ಗೆ ಹೊಸ ಅಧ್ಯಕ್ಷರನ್ನು ನೇಮಿಸಿದ ಒಂದು ವಾರದೊಳಗಾಗಿಯೇ ಟೆಂಡರಿನ ಹೆಚ್ಚು ರೇಟನ್ನು ಕೇಳಿದ ಗೋಪಾಲ ಕಂಟ್ರಾಕ್ಟರರಿಗೆ ಮನೆ ಕಟ್ಟುವುದಕ್ಕೆ ಗುತ್ತಿಗೆ ಕೊಡಲಾಗಿತ್ತು. ಇದರಲ್ಲೇನೂ ಆತಂಕವಿಲ್ಲವೆಂಬ ಅಭಿಪ್ರಾಯವನ್ನು ಮುಖ್ಯಮಂತ್ರಿ ಹೆಗಡೆಯವರು ವ್ಯಕ್ತ ಮಾಡಿದ್ದರು. ಅವರದು ಪ್ರಶ್ನಾರ್ಥಕ ಸಮಸ್ಯೆಯಾಗಿಯೇ ಉಳಿದಿದೆ.

ಈಗ ಚಿಕ್ಕದೇವರಾಯನ ಹಳ್ಳಿಯಲ್ಲಿ ನಿರ್ಮಿಸಲ್ಪಟ್ಟ ಕೆಲವು ಸಿಮೆಂಟ್ ಕಾಂಕ್ರೀಟ್ ಮನೆಗಳನ್ನು ಬುಲ್‌ಡೋಜರ್ ಹಚ್ಚಿ ಕೆಡವಲಾಯಿತು. ಬಿ.ಡಿ.ಎ.ಯ ಒಪ್ಪಿಗೆ ಪಡೆಯದೆ ಅತಿಕ್ರಮಣ ಮಾಡಿ ಮನೆ ಕಟ್ಟಲಾಗಿದೆ. ಅದ್ದರಿಂದ ಈ ಮನೆಗಳನ್ನು ಕೆಡುವುತ್ತೇವೆಂದು ಬಿ.ಡಿ.ಎ. ಅಧಿಕಾರಿಗಳ ಹೇಳಿಕೆ. ಮಂತ್ರಿ ಚಂದ್ರಶೇಖರ, ಬಿ. ಡಿ. ಎ. ಛೇರ್ಮನ್‌ಗಳಲ್ಲಿ ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ, ಆದರೆ ಅವರ ಸಮರ್ಥನೆಯನ್ನು ಒಪ್ಪುವುದು ಮಾತ್ರ ಕಷ್ಟಕರ.

ರಾಜ್ಯದ ಪ್ರತಿಯೊಂದು ನಗರ ಪಟ್ಟಣಗಳಲ್ಲಿ ಬಡವರೂ ಶ್ರೀಮಂತರೆಲ್ಲ ಅತಿಕ್ರಮಣ ಮಾಡುತ್ತಲೇ ಇದ್ದಾರೆಂಬ ಸಂಗತಿ ಜಗಜ್ಜಾಹೀರ. ಇದರಲ್ಲಿ ಬಡಬಗ್ಗರ ಗುಡಿಸಲುಗಳನ್ನು ಕರುಣೆ ಇಲ್ಲದೆ ಕೆಡವಲಾಗುತ್ತಿದೆ. ದೊಡ್ಡವರಿಗೆ ಎಲ್ಲ ರೀತಿಯ ರಕ್ಷಣೆ ನೀಡಲಾಗುತ್ತಿದೆ.

ಈಗ ಚಿಕ್ಕದೇವರಾಯನ ಹಳ್ಳಿಯ ಪ್ರಕರಣವನ್ನೇ ವಿಚಾರ ಮಾಡೋಣ. ಸಿಮೆಂಟ್ ಕಾಂಕ್ರೀಟ್ ಮನೆ ಕಟ್ಟಲಿಕ್ಕೆ ಕನಿಷ್ಟ 8-10 ತಿಂಗಳಾದರೂ ಬೇಕು. ನಗರ ಕಾರ್ಪೊರೇಷನ್, ಬಿ. ಡಿ. ಎ. ಅಧಿಕಾರಿಗಳ ಮಂಜೂರಿ ಬೇಕು. ಅವುಗಳಿಲ್ಲದೆ ಕಟ್ಟಡ ಕಟ್ಟುವಂತಿಲ್ಲ. ಮನೆ ಕಟ್ಟಿದ್ದಕ್ಕೆ ಅದಕ್ಕೆ ವಿದ್ಯುತ್ ಸಿಗಲು ಸಾಧ್ಯವಿಲ್ಲ. ಮನೆಯಾಗಿ, ವಿದ್ಯುತ್, ನೀರುಗಳೆಲ್ಲ ಕೊಡಮಾಡಲ್ಪಟ್ಟಿದೆ. ಆ ಕಟ್ಟಡಗಳೆಲ್ಲ ಅತಿಕ್ರಮಣವಾಗಿದ್ದರೆ, ಬಿ.ಡಿ.ಎ. ಅಧಿಕಾರಿಗಳು, ಬೆಂಗಳೂರು ಕಾರ್ಪೊರೇಷನ್ ಅಧಿಕಾರಿಗಳು ಈ ಕಟ್ಟಡಗಳನ್ನು ಕಟ್ಟುವಾಗ ಏನು ಮಾಡುತ್ತಿದ್ದರು? ಬೆಕ್ಕು ಕಣ್ಣು ಮುಚ್ಚಿ ಹಾಲು ಕುಡಿಯುತ್ತಿರುವಂತೆ ಅಕ್ರಮವಾಗಿ ಕಟ್ಟಡಗಳು ತಲೆ ಎತ್ತುವಂತೆ ಮಾಡಿದವರು ಈ ಕಟ್ಟಡಗಳ ಮಾಲೀಕರ ಹಾಲು ಕುಡಿದ ಅಧಿಕಾರಿಗಳೂ ಮೇಲ್ವಿಚಾರಕರೇ ಅಲ್ಲವೇ? ಆದ ಕಾರಣ ಅತಿಕ್ರಮಣ ಮಾಡಿದವರಿಗೆ ಸಹಾನುಭೂತಿ ತೋರಿಸದಿದ್ದರೂ ಕೂಡ ಈ ಕಟ್ಟಡಗಳು ಪೂರ್ತಿಗೊಳ್ಳುವ ತನಕ ಕಣ್ಣುಮುಚ್ಚಾಲೆ ಮಾಡಿದವರಿಗೆ ಯಾವ ಶಿಕ್ಷೆ ಕೊಡಲಾಯಿತು. ಆದ್ದರಿಂದ ಬಿ. ಡಿ. ಎ. ಪ್ರಾಧಿಕಾರದ ಪೂರ್ಣ ವಿಚಾರಣೆಯಾಗಬೇಕು. ತಪ್ಪಿತಸ್ಥರಿಗೆ ಉಗ್ರ ಶಿಕ್ಷೆಯಾಗಬೇಕು. ಇದರ ಸಲುವಾಗಿ ವಿಶಾಲ ತಳಹದಿಯ ಚಳುವಳಿ ನಡೆಯಲೇ ಬೇಕು.

ಕೊಳೆತು ನಾರುವ ರಸ್ತೆ ಸಾರಿಗೆ ಸಂಸ್ಥೆ

ರಾಜ್ಯ ಸರಕಾರ ನಡೆಸುತ್ತಿರುವ ಹಲವಾರು ಘಟಕಗಳಲ್ಲಿ ರಸ್ತೆ ಸಾರಿಗೆ ಒಂದು. ಭ್ರಷ್ಟಾಚಾರ ಲಂಚಗುಳಿತನ, ಮೋಸಗಾರಿಕೆ, ಅದಕ್ಷತೆಗಳಿಗೆ ಹೆಸರುವಾಸಿಯಾದ ರಾಜ್ಯ ಸರಕಾರದ ಘಟಕಗಳಲ್ಲಿ ಕೆ. ಎಸ್. ಆರ್. ಟಿ. ಸಿಯೂ ಒಂದು, ಪ್ರತಿನಿತ್ಯ ಸಾರ್ವಜನಿಕರಿಗೆ ಪ್ರಯಾಣ ಸೌಕರ್ಯ ಒದಗಿಸುವ ಜವಾಬ್ದಾರಿ ಹೊತ್ತಿರುವ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೊಳೆತು ನಾರುವ ಕೊಂಪೆಯಾಗಿದೆ. ಎಷ್ಟೋ ನಿಷ್ಠಾವಂತ ಅಧಿಕಾರಿಗಳು ಅಧಿಕಾರ ನಡೆಸಿದರೂ ಸುಧಾರಣೆ ಕಂಡು ಬರುತ್ತಿಲ್ಲ. ಮಂತ್ರಿ ಪ್ರಕಾಶ ಅವರೇ ಹೇಳುವಂತೆ "ರಸ್ತೆ ಸಾರಿಗೆ ಕಾರ್ಪೊರೇಶನ್ನಿನಲ್ಲಿ ಸೋರಿ ಹೋಗುತ್ತಿರುವ ಹಣದ ಪ್ರಮಾಣ ಶೇ 15 ಇದನ್ನು ತಡೆಗಟ್ಟಲು ಹಲವಾರು ಕ್ರಮಗಳನ್ನು ಕೈಗೊಳ್ಳಲಾಗಿದೆ". ಅಧಿಕಾರಿಗಳಿಂದ ಹಿಡಿದು ಕಂಡಕ್ಟರವರೆಗೂ ಈ ಸುಲಿಗೆಯಲ್ಲಿ ಪಾಲುಗಾರರು. ರಾಯಚೂರು ಗುಲ್ಬರ್ಗಾ ಹಾಗೆಯೇ ಇನ್ನೂ ಕೆಲವು ವಿಭಾಗಗಳಲ್ಲಿ ನೌಕರದಾರರೆಲ್ಲ "ಉದ್ಧಾರ"ವಾಗಿದ್ದಾರೆ. "ಸಾಹೇಬರುಗಳಂತೆ ತಾವೂ ಸಿಮೆಂಟ್ ಕಾಂಕ್ರೀಟ್ ಮನೆ ಹೊಂದಿದ್ದಾರೆ. ಗುಲ್ಬರ್ಗಾದ ಡಿಪೋದಲ್ಲಿದ್ದ ಬಸ್ಸೊಂದನ್ನೇ ಮಾರಾಟ ಮಾಡಲಾಯಿತು. ತಿಕೇಟಿಲ್ಲದ ಪ್ರಯಾಣಿಕರನ್ನು ಹೊತ್ತುಕೊಂಡ ಬಸ್‌ಗಳು ನಿರಾತಂಕವಾಗಿ ಓಡಾಡುತ್ತಿವೆ. ಮದ್ರಾಸಿನಲ್ಲಿ ಛಾಪಿಸಲ್ಪಟ್ಟ ತಿಕೇಟುಗಳನ್ನು ಬೆಂಗಳೂರು ಕಂಡಕ್ಟರರು ಉಪಯೋಗಿಸುತ್ತಿದ್ದಾರೆ.

ಈ ರೀತಿ ಇಡೀ ಸಂಸ್ಥೆ ಲೂಟಿಯಾಗುತ್ತಿದ್ದರೂ ಕೂಡ ಅದನ್ನು ಸರಿಪಡಿಸುವಂಥ ಮಂತ್ರಿ ಮಾತ್ರ ಹುಟ್ಟಿ ಬಂದಿಲ್ಲ. ಯಾರಾದರೂ ಸರಿಪಡಿಸಲಿಕೆ ಪ್ರಯತ್ನ ಮಾಡಿದರೆ, ಅಂಥವರು ಹೆಚ್ಚು ಸಮಯ ಕುರ್ಚಿಯಲ್ಲಿ ಕೂಡ್ರುವ ಸಾಧ್ಯತೆಯಿಲ್ಲವೆಂಬುದನ್ನು ಅಧಿಕಾರಿ–ನೌಕರದಾರರಲ್ಲಿರುವ ಪಟ್ಟಭದ್ರ ಹಿತಾಸಕ್ತಿಗಳು ತಿಳಿದುಕೊಂಡಿದ್ದಾರೆ.

ಉತ್ಪನ್ನ ಈ ರೀತಿ ಬಹಿರಂಗವಾಗಿಯೇ ಪೋಲಾಗುತ್ತಿರುವಾಗ ನಾಗರೀಕರಿಗೆ ಯಾವ ಸೌಲಭ್ಯವೂ ಒದಗಿಸಲ್ಪಡುತ್ತಿಲ್ಲ. ತಮ್ಮ ಹೃದಯವನ್ನು ಮುಷ್ಟಿಯಲ್ಲಿ ಭದ್ರವಾಗಿಟ್ಟುಕೊಂಡೇ ಎಸ್. ಟಿ. ಯಲ್ಲಿ ಪ್ರಯಾಣ ಮಾಡಬೇಕು. ವೇಳೆಗೆ ಸರಿಯಾಗಿ ಹೊರಡುವುದೆಂದರೇನು ಸಮಯಕ್ಕೆ ಸರಿಯಾಗಿ ತಲುಪುವುದೆಂದರೇನೆಂಬುದನ್ನು ನೌಕರದಾರರು ಅರಿತಿಲ್ಲ. ಸೌಜನ್ಯತೆ ಎಂಬುದನ್ನು ಗಂಟುಕಟ್ಟಿ ಇಡಲಾಗಿದೆ. ದೂರ ಪ್ರಯಾಣದ ಬಸ್‌ಗಳಲ್ಲಿ ಸ್ಟೆಪ್ನಿ, ಜ್ಯಾಕ್ ಮತ್ತಿತರ ರಿಪೇರಿ ಸಾಮಾನುಗಳನ್ನು ಒದಗಿಸುವುದಿಲ್ಲ. ಇದು ನಮ್ಮ ಸಾರಿಗೆ ಸಂಸ್ಥೆ.

"ಕಳೆದ ವರ್ಷ ರ. ಸಾ. ಕಾರ್ಪೊರೇಶನ ಅನುಭವಿಸಿದ ಹಾನಿ ರೂ. 1[illegible] ಕೋಟಿ, ಇದರ ಪೈಕಿ ಬಿ. ಟಿ. ಎಸ್‌ನ ನಷ್ಟ ರೂ 6 ಕೋಟಿ. ಪ್ರಸ್ತುತ ಸಾಲಿನಲ್ಲಿ (83-84) ಈ ಹಾನಿ ರೂ. 20 ಕೋಟಿಗೂ ಮೀರಬಹುದೆಂದು ಅಂದಾಜು ಮಾಡಲಾಗಿದೆ" ಎಂದು ಸಾರಿಗೆ ಸಚಿವ ಪ್ರಕಾಶ ಹೇಳಿದ್ದಾರೆ. ಬಸ್ ಪ್ರಯಾಣದರ ಹೆಚ್ಚಿಸಲು ತಮಗೆ ಮನಸಿಲ್ಲೆಂದೂ ಆದರೆ ಸಂಸ್ಥೆಗಾಗುವ ಹಾನಿಯನ್ನು ತುಂಬಿಕೊಳ್ಳಲು ಕಾರ್ಪೊರೇಶನಿಗೆ ಸೇರಿದ ಬಸ್ಸುಗಳಿಗೆ ವಾಹನ ತೆರಿಗೆ ಹೇರಬಾರದೆಂದು ಸರಕಾರಕ್ಕೆ ಒತ್ತಾಯ ಮಾಡಲಾಗುವುದೆಂದೂ ಅವರು ಹೇಳಿದ್ದಾರೆ. ಇದರಲ್ಲಿ ಮಂತ್ರಿಗಳು ಗೆಲ್ಲಬಹುದು. ಆದರೆ ಬಿಳಿ-ಆನೆಯಂತಿರುವ ಕಾರ್ಪೊರೇಶನಿನ ಆಡಳಿತವನ್ನು ಸುಧಾರಿಸಿ ಸೋರುತ್ತಿರುವ ತೂತುಗಳನ್ನು ಮುಚ್ಚುವ ಸಮರ್ಪಕವಾದ ಯಾವ ಕ್ರಮವನ್ನಾಗಲೀ ಮಂತ್ರಿವರ್ಯರು ಸೂಚಿಸಿರುವುದಿಲ್ಲ. ಕಾರ್ಪೊರೇಶನ್ ಲಾಭದಾಯಕವಾಗಿ ನಡೆಯಬೇಕಾದರೆ, ನಾಗರೀಕರಿಗೆ ಯೋಗ್ಯ ಅನುಕೂಲತೆಗಳು ಸಿಗಬೇಕಾದರೆ, ಆಡಳಿತದಲ್ಲಿ ಆಮೂಲಾಗ್ರ ಸುಧಾರಣೆಯಾಗಬೇಕು. ನೌಕರದಾರರಲ್ಲೂ, ಅಧಿಕಾರಿಗಳಲ್ಲೂ ನಿಜವಾದ ಪ್ರಜ್ಞೆ ಉಂಟಾಬೇಕು. ಈ ದಿಸೆಯಲ್ಲಿ ದೃಢ ಮನಸ್ಸಿನಿಂದ ಕಾರ್ಯಮಾಡುವ ಧೈರ್ಯ ಮಂತ್ರಿ ಪ್ರಕಾಶ ಅವರಿಗಿದೆಯೇ? ನೋಡೋಣ.

ಉದ್ಯಮಗಳ ಉದಯವಾದೀತೆ?

ನಮ್ಮ ರಾಜ್ಯದಲ್ಲಿ ತಿಂಗಳಿಗೆ ಒಂದು ಸಾವಿರ ಸಣ್ಣ ಉದ್ಯಮಗಳನ್ನು ಸ್ಥಾಪಿಸಲಾಗುವುದೆಂಬ ಆಶಯವನ್ನು ಕೈಗಾರಿಕಾ ಮಂತ್ರಿ ಬೊಮ್ಮಾಯಿಯವರು ವ್ಯಕ್ತಪಡಿಸಿದ್ದಾರೆ. ಬಹಳ ಉಚ್ಚ ಮಟ್ಟದ ಆಶಯ ಇದಾಗಿದೆ. ನಾವು ಸರಕಾರದ ನಿರ್ಣಯವನ್ನು ಸ್ವಾಗತ ಮಾಡುತ್ತಿರುವಾಗ, ಇದರ ಸಾಧ್ಯತೆಯ ಕ್ರಮವನ್ನೂ ಪ್ರಶ್ನಿಸಬೇಕಾಗಿದೆ. ಸಾವಿರಾರು ನಿರುದ್ಯೋಗಿ ವಿದ್ಯಾವಂತರು ಸಣ್ಣ ಕೈಗಾರಿಕೆಗಳ ಸ್ಥಾಪನೆಗಾಗಿ ಹಾತೊರೆಯುತ್ತಿದ್ದಾರೆ. ಆದರೆ ಕೈಗಾರಿಕಾ ಖಾತೆ, ಅದರ ಅಧಿಕಾರಿಗಳು ಹಾಗೆಯೇ ಕೆಲವು ಮಟ್ಟಿಗೆ ಬ್ಯಾಂಕಿನವರು ಕೂಡ ಇಂಥವರ ಆಶೋತ್ತರಗಳಿಗೆ ನೀರು ಎರೆಯುತ್ತಿದ್ದಾರೆ. ಇತರ ಖಾತೆಗಳಂತೆಯೇ ಕೈಗಾರಿಕಾ ಖಾತೆಯಲ್ಲಿ ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳೆಲ್ಲ ಮನೆ ಮಾಡಿಕೊಂಡಿವೆ. ಆದ ಕಾರಣ ಇಂಡಸ್ಟ್ರಿಯಲ್ ಎಸ್ಟೇಟುಗಳಲ್ಲಿಯ ಶೆಡ್ಡುಗಳು ಅರ್ಹ ಅರ್ಜಿದಾರರಿಗೆ ಸಿಗುತ್ತಿಲ್ಲ. ಶೆಡ್ಡು ಕೊಡಮಾಡಿದ ಕೆಲವು ತಿಂಗಳೊಳಗಾಗಿಯೇ ದೊಡ್ಡ ಕೈಗಾರಿಕೋದ್ಯಮಿಗಳ ಕಾರ್ಖಾನೆಗಳು ಖಾಲಿಯಾಗಿಯೇ ಉಳಿದಿರುತ್ತವೆ. ಸರಕಾರದಿಂದ ಬರುವ ಸಬ್‌ಸಿಡಿ, ಕಡಿಮೆ ಬಡ್ಡಿಯ ಸಾಲಗಳನ್ನೆಲ್ಲ ಕಾರ್ಖಾನೆಯ ಹೆಸರಲ್ಲಿ ಪಡೆದು, ಅದನ್ನು ನುಂಗಿ ತೇಗುತ್ತ ತಿರುಗಾಡುತ್ತಾರೆ. ಈ ಜನ ಕೈಗಾರಿಕಾ ಅಧಿಕಾರಿಗಳ ಮುಂದೆ ಅಂಥವರ ಮೇಲೆ ಕ್ರಮ ಕೈಗೊಳ್ಳುವ ಧೈರ್ಯ ಮಾತ್ರ ಯಾರಿಗೂ ಇಲ್ಲ. ಜನತಾ ಸರಕಾರದಲ್ಲೂ ಕೂಡ ಈ ಸಮಸ್ಯೆ ಬಗೆಹರಿದಿಲ್ಲ. ಶೆಡ್ಡುಗಳ ವಿತರಣೆಯ ಕುರಿತು ಆಮೂಲಾಗ್ರ ಚೌಕಾಶಿ ನಡೆಸುವುದು ಅತ್ಯಗತ್ಯ.

ಕಚ್ಚಾ ಮಾಲು ಸಿಗದಿರುವಿಕೆ ವಿದ್ಯುತ್ ಕೊರತೆ, ಮೊದಲಾದ ಕಾರಣಗಳಿಂದಾಗಿ ನಿಜವಾಗಿಯೂ ಕೆಲವು ಘಟಕಗಳು ಮುಚ್ಚಲ್ಪಡುವಂಥ ಪರಿಸ್ಥಿತಿ ಉಂಟಾಗಿರುವುದನ್ನೂ ನೋಡುತ್ತಿದ್ದೇವೆ. ಇವುಗಳ ಸಹಾಯಕ್ಕೂ ಯಾರೂ ಮುಂದೆ ಬರುತ್ತಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಪ್ರತಿ ತಿಂಗಳು ಒಂದು ಸಾವಿರ ಉದ್ಯಮ ಘಟಕಗಳನ್ನು ಸ್ಥಾಪಿಸುತ್ತೇವೆಂದು ಮಂತ್ರಿಗಳು ಹೇಳುತ್ತಿರುವುದನ್ನು ನೋಡುವಾಗ ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಸಮಸ್ಯೆಗಳ ಸಂಪೂರ್ಣ ಅರಿವು ಮಾತ್ರ ಸಂಬಂಧಪಟ್ಟ ಮಂತ್ರಿಗಳಿಗಿದ್ದಂತೆ ಕಂಡು ಬರುವುದಿಲ್ಲ.

ರಾಜ್ಯದಲ್ಲಿ ಕೈಗಾರಿಕೋದ್ಯಮಗಳು ಹೆಚ್ಚೆಚ್ಚಾಗಿ ತಲೆಎತ್ತಲೇ ಬೇಕೆಂಬುದರಲ್ಲಿ ಎರಡಭಿಪ್ರಾಯವಿಲ್ಲ. ಆದರೆ ನಿರಂತರವಾಗಿ ಘಟಕಗಳನ್ನು ನಡೆಸುವವರಿಗೆ ಸರಕಾರದಿಂದ ಪ್ರೋತ್ಸಾಹ ಸಿಗುತ್ತಿದೆಯೇ, ಸಕಾಲದಲ್ಲೇ ಯಾವ ಅಡ್ಡಿ ಆತಂಕಗಳಿಲ್ಲದೆ ಸಮಸ್ಯೆಗಳು ಬಗೆಹರಿಸಲ್ಪಡುತ್ತಿದೆಯೇ ಎಂಬ ಪ್ರಶ್ನೆ. ಈ ದಿಸೆಯಲ್ಲಿ ಗುಂಡೂರಾವ್ ಸರಕಾರಕ್ಕೂ ಈ ಸರಕಾರಕ್ಕೂ ಇನ್ನೂ ಹೆಚ್ಚಿನ ವ್ಯತ್ಯಾಸ ಕಂಡು ಬರುತ್ತಿಲ್ಲ.

ಸಿ.ಪಿ.ಐ. (ಎಂ) ಕೇಂದ್ರ ಸಮಿತಿಯ ನಿರ್ಣಯಗಳು

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯ ಸಭೆಯು ನವದೆಹಲಿಯಲ್ಲಿ 1983 ಏಪ್ರಿಲ್ 5ರಿಂದ 7ರವರೆಗೆ ಮೂರು ದಿವಸಗಳ ಕಾಲ ನಡೆಯಿತು.

ವಿಶ್ವಶಾಂತಿಗಾಗಿ ನಡೆದಿರುವ ಹೋರಾಟವನ್ನು ಬಲಪಡಿಸುವಲ್ಲಿ ಮತ್ತು ಸಾಮ್ರಾಜ್ಯಶಾಹಿಯ ವಿರುದ್ಧ ತೃತೀಯ ಜಗತ್ತಿನ ಜನತೆಯ ಮುಖ್ಯ ಹಿತಗಳನ್ನು ರಕ್ಷಿಸುವಲ್ಲಿ ಇತ್ತೀಚೆಗೆ ನಡೆದ ಅಲಿಪ್ತ ದೇಶಗಳ ಸಭೆ ಮತ್ತು ಅಪರ ಕಾರ್ಯ ಕಲಾಪಗಳು ಬಹಳ ಸಹಾಯಕವಾಗುವುದು ಎಂದು ಪೊಲಿಟ್ ಬ್ಯೂರೋ ಮಾಡಿದ ಅಂದಾಜನ್ನು ಕೇಂದ್ರ ಸಮಿತಿಯು ಅನುಮೋದಿಸಿತು.

ಕೇಂದ್ರ–ರಾಜ್ಯಗಳ ಸಂಬಂಧಗಳನ್ನು ಅವಲೋಕಿಸಬೇಕೆಂದು ಸಿ. ಪಿ. ಐ (ಎಂ) ಬಹಳ ಕಾಲದಿಂದ ಕೇಳುತ್ತಿದ್ದು, ಕೇಂದ್ರ–ರಾಜ್ಯಗಳ ಸಂಬಂಧಗಳನ್ನು ಪರಿಶೀಲಿಸಲು ಸರ್ಕಾರಿಯಾ ಆಯೋಗವನ್ನು ನೇಮಿಸಿರುವುದು, ಈ ಬೇಡಿಕೆಯ ಸತ್ವವು ಸಾರ್ವತ್ರಿಕ ಮನ್ನಣೆಯನ್ನು ಪಡೆದಿರುವುದರ ಪ್ರತಿಬಿಂಬ ಎಂದು ಕೇಂದ್ರ ಸಮಿತಿಯು ಪರಿಗಣಿಸುತ್ತದೆ. ಭಾರತದಂತಹ ಬಹು ರಾಷ್ಟ್ರೀಯ ದೇಶವು ಬಲಿಷ್ಟವಾಗಿಯೂ ದೃಢವಾಗಿಯೂ ಇರಬೇಕಾದರೆ ದೇಶದ ಘಟಕಗಳಾದ ರಾಜ್ಯಗಳಿಗೆ ಅತ್ಯಂತ ವಿಶಾಲವಾದ ಪ್ರಜಾಪ್ರಭುತ್ವವನ್ನೂ, ಸಂಪೂರ್ಣ ಸ್ವಾಯತ್ತತೆಯನ್ನೂ ಮಾತಿನಲ್ಲಿಯೂ, ಕೃತಿಯಲ್ಲಿಯೂ ಖಾತರಿಗೊಳಿಸುವುದು ಅತ್ಯಗತ್ಯ ಎಂದು ಸಿ. ಪಿ. ಐ. (ಎಂ) ಮೊದಲಿನಿಂದಲೂ ಅಭಿಪ್ರಾಯಪಟ್ಟಿದೆ.

ಒಕ್ಕೂಟದ ಸೂತ್ರವನ್ನು ಬಲಪಡಿಸುವ ದಿಕ್ಕಿನಲ್ಲಿ ಸಂವಿಧಾನವು ಹೇಗೆ ಕೆಲಸ ಮಾಡಿದೆ ಎಂಬುದನ್ನು ಅಮೂಲಾಗ್ರವಾಗಿ ಪರಿಶೀಲಿಸುವಂತೆ ಆಯೋಗದ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಬೇಕು ಎಂದು ಕೇಂದ್ರ ಸಮಿತಿಯು ಆಗ್ರಹಪಡಿಸುತ್ತದೆ. ಕೇಂದ್ರ ರಾಜ್ಯಗಳ ಸಂಬಂಧಗಳ ಬಗ್ಗೆ ಒಂದು ಸ್ಥಿರವಾದ ರಾಜಕೀಯ ಹೋರಾಟವನ್ನು ನಡೆಸದಿದ್ದರೆ ಈ ಆಯೋಗದ ರಚನೆಯು ಕೇಂದ್ರ–ರಾಜ್ಯ ಸಂಬಂಧಗಳ ಪುನರ್‌ರಚನೆಯನ್ನು ತಡೆಹಿಡಿಯುವ ಕಾಂಗ್ರೆಸ್ (ಐ) ನ ಇನ್ನೊಂದು ವಿಳಂಬತಂತ್ರವಾದೀತು ಎಂದು ಕೇಂದ್ರ ಸಮಿತಿಯು ಎಚ್ಚರಿಸುತ್ತದೆ.

ಅಸ್ಸಾಂ ಮತ್ತು ಪಂಜಾಬ್ ರಾಜ್ಯಗಳೊಳಗಿನ ವಿದ್ಯಮಾನಗಳ ಬಗ್ಗೆ ಅಂಗೀಕರಿಸಿರುವ ಎರಡು ಗೊತ್ತುವಳಿಗಳಲ್ಲಿ ಆ ರಾಜ್ಯಗಳಲ್ಲಿ ಕ್ಷೀಣಿಸುತ್ತಿರುವ ಪರಿಸ್ಥಿತಿಯ ಬಗ್ಗೆ ಕೇಂದ್ರ ಸಮಿತಿಯು ತೀವ್ರ ಕಳವಳವನ್ನು ವ್ಯಕ್ತಪಡಿಸಿದೆ. ಈ ಎರಡು ಸಮಸ್ಯೆಗಳನ್ನು ಸರಿಯಾಗಿ, ಸಕಾಲದಲ್ಲಿ ಎದುರಿಸುವಲ್ಲಿ ವಿಶೇಷವಾಗಿ ಸಶಸ್ತ್ರದಂಗೆಯ ರೂಪವನ್ನು ತಾಳುತ್ತಿರುವ ಅಸ್ಸಾಮಿನ ಪ್ರತ್ಯೇಕತಾವಾದಿ ಪ್ರಕ್ಷೋಭೆಯನ್ನು ಎದುರಿಸುವಲ್ಲಿ ಕೇಂದ್ರ ಸರಕಾರದ ವಿಫಲತೆಯನ್ನು ತೀಕ್ಷ್ಣವಾಗಿ ಖಂಡಿಸಿದೆ.

ಪ್ರತ್ಯೇಕತಾವಾದಿ ಚಳುವಳಿಗಳನ್ನು ನಡೆಸುತ್ತಿರುವ ಅಖಿಲ ಅಸ್ಸಾಂ ವಿದ್ಯಾರ್ಥಿಗಳ ಸಂಘ ಮತ್ತು ಅಖಿಲ ಅಸ್ಸಾಂ ಗಣ ಸಂಗ್ರಾಮ ಪರಿಷತ್ ನಾಯಕರೊಂದಿಗೆ ಕೊನೆಯಿಲ್ಲದ ಮಾತುಕತೆಗಳನ್ನು ನಡೆಸುತ್ತಾ ಬಂದಿದ್ದು ವರ್ಷಗಳಾದರೂ ವಿದೇಶಿಯರ ಪ್ರಶ್ನೆಯೆಂದು ಕರೆಯಲ್ಪಡುವ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಕೇಂದ್ರ ಸರ್ಕಾರವು ಸಂಪೂರ್ಣ ವಿಫಲವಾಗಿದೆ ಎಂದು ಅಭಿಪ್ರಾಯ ಪಡುತ್ತದೆ. ಚಳುವಳಿಕಾರರ ವಿರುದ್ಧ ಹಾಗೂ ಅವರ ರಾಷ್ಟ್ರ ವಿರೋಧಿ ಚಳುವಳಿಯ ವಿರುದ್ಧ ಪ್ರಜಾಭಿಪ್ರಾಯವನ್ನು ಬೆಳೆಸಲು ಸರ್ಕಾರವಾಗಲೀ ಕಾಂಗ್ರೆಸ್ (ಐ) ಪಕ್ಷವಾಗಲೀ ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ಚಳುವಳಿಗೆ ಸಂಬಂಧಿಸಿದ ಸಮಗ್ರ ವಿಷಯಗಳನ್ನು ಜನತೆಯ ಮುಂದೆ ಇಡಲಿಲ್ಲ.

ಘಟನೆಗಳು ತೋರ್ಪಡಿಸುವಂತೆ ಅಸ್ಸಾಂ ಚಳುವಳಿಯು ಅಸ್ಸಾಮೇತರ ಅಲ್ಪ ಸಂಖ್ಯಾತರ ವಿರುದ್ಧವಾಗಿ, ವಿಶೇಷವಾಗಿ ಹಿಂದು ಮತ್ತು ಮುಸ್ಲಿಂ ಬಂಗಾಳಿಗಳ ವಿರುದ್ಧ ನಿರ್ದೇಶಿಸಲ್ಪಟ್ಟಿದೆ. ಅಸ್ಸಾಂನಲ್ಲಿ ಸಹಸ್ರಾರು ಮುಗ್ಧ ಜೀವಿಗಳ ಹತ್ಯೆಗೆ ಚಳುವಳಿಯ ನಾಯಕರೇ ಜವಾಬ್ದಾರರು ಎಂದು ಕೇಂದ್ರ ಸಮಿತಿಯು ಹೇಳುತ್ತದೆ. ಹಲವು ದಶಕಗಳ ಹಿಂದೆ ರೈತರಾಗಿ, ಕಾರ್ಮಿಕರಾಗಿ ನೆಲೆಸಿರುವ ಮುಸ್ಲಿಂ ಅಲ್ಪ ಸಂಖ್ಯಾತರ ವಿರುದ್ಧ ಹಿಂಸೆ ಮತ್ತು ಭಯೋತ್ಪಾದನೆಗಳನ್ನು ನಿರ್ದೇಶಿಸುವ ಕೃತ್ಯಗಳಲ್ಲಿ ಆರ್. ಎಸ್. ಎಸ್. ವಹಿಸಿರುವ ಅನಿಷ್ಟ ಪಾತ್ರವನ್ನು ಕೇಂದ್ರ ಸಮಿತಿಯು ತೀವ್ರ ಕಳವಳದಿಂದ ಗಮನಿಸುತ್ತದೆ.

ಪ್ರಜಾ ಪ್ರಭುತ್ವ ರೀತಿಯಲ್ಲಿ ಚುನಾವಣೆಯನ್ನು ನಡೆಸುವಲ್ಲಿ ಚಳುವಳಿಗಾರರ ಭಯೋತ್ಪಾದಕ ತಂಡಗಳ ದಾಳಿಯ ವಿರುದ್ಧ ಮತದಾರರಿಗೆ ರಕ್ಷಣೆಯನ್ನು ಒದಗಿಸುವಲ್ಲಿ ಕೇಂದ್ರ ಸರ್ಕಾರದ ಸಂಪೂರ್ಣ ವೈಫಲ್ಯ ಖಂಡನಾರ್ಹ. ಕಾಂಗ್ರೆಸ್ (ಐ) ಪಕ್ಷವು ಭಯದ ವಾತಾವರಣವನ್ನು ತನ್ನ ಚೇಳಿ ಬೇಳಿಸಿಕೊಳ್ಳಲು, ಕೈ ಚಳಕದಿಂದ ಚುನಾವಣಾ 'ವಿಜಯ ಸಾಧಿಸಲು' ಉಪಯೋಗಿಸಿಕೊಂಡಿದೆ.

ಅಸ್ಸಾಮಿನಲ್ಲಿ ಪ್ರಜಾಪ್ರಭುತ್ವ ರೀತಿಯಲ್ಲಿ ಚುನಾವಣೆಗಳು ನಡೆಯುವುದನ್ನು ತಡೆಯುವ, ಜನರ ಮೇಲೆ ಭಯೋತ್ಪಾದಕ ಕೃತ್ಯಗಳನ್ನು ನಡೆಸುವ ಅಸ್ಸಾಮೀ ಚಳುವಳಿಕಾರರಿಗೆ ಕ್ರಿಯಾಶೀಲವಾಗಿ ಬೆಂಬಲಿಸಲು ಏನೆಲ್ಲಾ ಮಾಡಿದ ಬಿ ಜೆ ಪಿ ಮತ್ತು ಜನತಾ ಪಕ್ಷಗಳಂತಹ ರಾಜಕೀಯ ಪಕ್ಷಗಳ ನಿಲುವುಯನ್ನು ಕೇಂದ್ರ ಸಮಿತಿಯು ಖಂಡಿಸುತ್ತದೆ. ಸಂವಿಧಾನದಲ್ಲಿ ಮತ್ತು ಪ್ರಜಾಪ್ರಭುತ್ವ ರೀತಿಯ ಚುನಾವಣೆ ನಡೆಸುವುದರಲ್ಲಿ ನಂಬಿಕೆಯಿದೆ ಎಂದು ಹೇಳುವ ಈ ರಾಜಕೀಯ ಪಕ್ಷಗಳು ಈಗಿರುವ ಮತದಾರರ ಪಟ್ಟಿಗಳಿಂದ ವಿದೇಶೀಯರೆಂದು ಕರೆಯಲ್ಪಡುವವರ ಹೆಸರುಗಳನ್ನು ತೆಗೆದುಹಾಕಬೇಕೆಂಬ ಬೇಡಿಕೆ ಈಡೇರುವವರೆಗೂ ಎಲ್ಲಾ ಪ್ರಜಾತಾಂತ್ರಿಕ ಚುನಾವಣಾ ಕ್ರಿಯಾಸರಣಿಗೆ ಬಹಿರಂಗವಾಗಿ ವಿರೋಧವನ್ನು ಶತ್ರುತ್ವವನ್ನು ಘೋಷಿಸಿ, ಕಳೆದ 3 ವರ್ಷಗಳಿಂದ ಅಸ್ಸಾಮಿನಲ್ಲಿ ಎಲ್ಲಾ ಚುನಾವಣೆಗಳನ್ನು ತಡೆದು ಹಿಡಿಯುತ್ತಿರುವ ಅಸ್ಸಾಮೀ ಚಳುವಳಿಕಾರರ ಜತೆ ಸೇರಿರುವುದು ನಿಜವಾಗಿಯೂ ವಿಚಿತ್ರವಾಗಿದೆ.

ರಾಜ್ಯದ ಮತದಾರರನ್ನು ಭಯೋತ್ಪಾದನೆಗೆ ಗುರಿಮಾಡಿ ಪ್ರಜಾಸತ್ತಾತ್ಮಕ ಚುನಾವಣಾ ಪ್ರಕ್ರಿಯೆಯನ್ನು ನಾಶಮಾಡಿ ಅಸ್ಸಾಮಿನ ಕಷ್ಟದ ಪರಿಸ್ಥಿತಿಯಲ್ಲಿ ಸರ್ವಾಧಿಕಾರಿ ಕಾಂಗ್ರೆಸ್ ಪಕ್ಷವು ಚುನಾವಣಾ 'ವಿಜಯ'ವನ್ನು ಗಳಿಸುವಂತಾಗುವುದಕ್ಕೆ ತತ್ವಬದ್ಧ ಪ್ರಜಾ ಪ್ರಭುತ್ವ ವೇದಿಕೆಯ ಆಧಾರದ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಎಡ, ಪ್ರಜಾಸತ್ತಾತ್ಮಕ ಮತ್ತು ಪ್ರಗತಿಶೀಲ ಶಕ್ತಿಗಳು ಸೋಲುವುದಕ್ಕೆ ಅಸ್ಸಾಂ ಚಳುವಳಿಕಾರರು ಮುಖ್ಯವಾಗಿ ಜವಾಬ್ದಾರರು ಎಂದು ಕೇಂದ್ರ ಸಮಿತಿ ಹೇಳುತ್ತದೆ.

ದೇಶವನ್ನು ವಿಭಜಿಸುವ ದುರುದ್ದೇಶದಿಂದ ಚಳುವಳಿಕಾರರನ್ನು ಅವರ ಬೆಂಕಿಯಿಡುವ ದಂಗೆಕೋರ ಸ್ವರೂಪಗಳ ಹೋರಾಟವನ್ನು ಕ್ರಿಯಾಶೀಲವಾಗಿ ಬೆಂಬಲಿಸುತ್ತಿರುವ ಅಮೇರಿಕದ ಸಾಮ್ರಾಜ್ಯಶಾಹಿಗಳ ಅನಿಷ್ಟ ಪಾತ್ರದ ಬಗ್ಗೆ ಕೇಂದ್ರ ಸಮಿತಿಯು ಜನತೆಯನ್ನು ಎಚ್ಚರಿಸುತ್ತದೆ.

ಅಸ್ಸಾಂ ಚಳುವಳಿಯ ಕೇಡು ಲಕ್ಷಣಗಳನ್ನು ಬಯಲುಗೊಳಿಸಲು ಅಸ್ಸಾಮಿನ ಪರಿಸ್ಥಿತಿಯನ್ನು ತಮ್ಮ ಸಂಕುಚಿತ ರಾಷ್ಟ್ರಘಾತುಕ ಪಕ್ಷಪಾತಿ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿರುವ ರಾಜಕೀಯ ಪಕ್ಷಗಳ ಹಾನಿಕರ ಪಾತ್ರವನ್ನು ಬಯಲುಗೊಳಿಸಲು ಇತರ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಸಹಕಾರದೊಂದಿಗೆ ದೀರ್ಘವಾದ ಸಾಮೂಹಿಕ ಚಳುವಳಿಯನ್ನು ಪ್ರಾರಂಭಿಸಬೇಕೆಂದು ಕೇಂದ್ರ ಸಮಿತಿಯ ಸಭೆಯು ದೇಶಾದ್ಯಂತ ಇರುವ ಪಕ್ಷದ ಸದಸ್ಯರಿಗೆ ಕರೆ ಕೊಟ್ಟಿದೆ.

ಅಕಾಲಿ ಪ್ರಕ್ಷೋಭೆಕಾರರ ಮೇಲೆ ನಡೆದ ಪೋಲೀಸು ಗೋಲೀಬಾರನ್ನು ಬಲವಾಗಿ ಖಂಡಿಸಿದ ಕೇಂದ್ರ ಸಮಿತಿಯು 26 ಜನರ ಪ್ರಾಣಹಾನಿ ಮತ್ತು ಹಲವು ನೂರು ಜನರಿಗೆ ಗಾಯಗಳಾಗಿರುವ ಬಗ್ಗೆ ತೀವ್ರ ಶೋಕವನ್ನು ವ್ಯಕ್ತಪಡಿಸಿ, ನ್ಯಾಯಾಂಗ ತನಿಖೆ ನಡೆಸಬೇಕೆಂದು ಒತ್ತಾಯಪಡಿಸಿದೆ.

ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿರುವ ಕಾಂಗ್ರೆಸ್ (ಐ) ಸರ್ಕಾರಗಳು ಪಂಜಾಬಿನಲ್ಲಿ ಇಡೀ ಅಕಾಲಿ ಪ್ರಶ್ನೆಯ ಬಗ್ಗೆ ಸರಿಯಾಗಿ ವ್ಯವಹರಿಸದೆ, ಅಕಾಲಿ ಉಗ್ರಗಾಮಿಗಳಿಗೆ ಉತ್ತೇಜನ ಸಿಕ್ಕಿ ಅವರು ತಮ್ಮ ವಿರೋಧಿಗಳ ಮೇಲೆ ಹಿಂಸಾತ್ಮಕ ದಾಳಿಗಳನ್ನು ನಡೆಸಲು ಸ್ವತಂತ್ರ 'ಖಲಿಸ್ಥಾನದ' ಘೋಷಣೆಯನ್ನು ಕೂಗಲು ಅನುವಾಗಿದೆ ಎಂದು ಕೇಂದ್ರ ಸಮಿತಿಯು ಅಭಿಪ್ರಾಯಪಟ್ಟಿದೆ. ಪಂಜಾಬಿ ಮಾತನಾಡುವ ಜನರ–ಸಿಕ್ಕರ ಮತ್ತು ಹಿಂದುಗಳ–ಐಕ್ಯತೆಯನ್ನು ಕಾಪಾಡಿಕೊಂಡು ಹೋಗಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡಬೇಕೆಂದೂ, ಅಕಾಲಿ ಉಗ್ರಗಾಮಿಗಳು ಅನುಸರಿಸುವ ಹಿಂಸಾಚಾರವನ್ನು ಖಂಡತುಂಡವಾಗಿ ಖಂಡಿಸಬೇಕೆಂದೂ ಅಕಾಲಿ ಪಕ್ಷದ ಮುಖ್ಯ ನಾಯಕತ್ವಕ್ಕೆ ಕೇಂದ್ರ ಸಮಿತಿಯು ಮನವಿ ಮಾಡಿಕೊಂಡಿದೆ.

ಭಿನ್ನಾಭಿಪ್ರಾಯಗಳು ಕಡಿಮೆಯಾಗಿರುವುದರಿಂದ ವಿವಾದವನ್ನು ಬಗೆಹರಿಸಲು ಆಸ್ಥೆ ವಹಿಸಬೇಕೆಂದು, ಕೇಂದ್ರ ಸಮಿತಿಯು ಪಂಜಾಬಿನ ಸಮಸ್ಯೆಯನ್ನು ಶಾಂತ ರೀತಿಯಲ್ಲಿ ಬೇಗ ಬಗೆಹರಿಸಲು ಆಸಕ್ತಿಯಿರುವ ಎಲ್ಲಾ ರಾಜಕೀಯ ಪಕ್ಷಗಳಿಗೆ ಕರೆ ಕೊಟ್ಟಿದೆ.

ಕಾಂಗ್ರೆಸ್ (ಐ) ನೇತೃತ್ವದಲ್ಲಿರುವ ಕೇರಳದ ಸಂಯುಕ್ತ ರಂಗ ಸರ್ಕಾರದಿಂದ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಉತ್ತೇಜನ ಪಡೆದು ಜಾತೀಯ ಮತ್ತು ಮತೀಯ ಶಕ್ತಿಗಳು ಬೆಳೆಯುತ್ತಿರುವುದರ ಬಗ್ಗೆ ಅದು ತೀವ್ರ ಕಳವಳವನ್ನು ವ್ಯಕ್ತಪಡಿಸಿದೆ. ಕೇರಳದಲ್ಲಿ ಉಂಟಾಗಿರುವ ಜಾತೀಯ ಮತ್ತು ಮತೀಯ ವಾತಾವರಣವನ್ನು ಉಪಯೋಗಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಆರ್. ಎಸ್. ಎಸ್‌ನ ಗಂಭೀರ ಗಂಡಾಂತರವನ್ನು ಅದು ಗಮನಕ್ಕೆ ತೆಗೆದುಕೊಂಡಿದೆ.

ಸಿ. ಪಿ. ಐ (ಎಂ)ನ ವಿವಿಧ ರಾಜ್ಯ ಸಮಿತಿಗಳು ಮಾರ್ಕ್ಸ್ ಮರಣ ಶತಾಬ್ದಿಯನ್ನು ಆಚರಿಸಲು ತೆಗೆದುಕೊಂಡಿರುವ ಕ್ರಮಗಳನ್ನು ತೃಪ್ತಿಯಿಂದ ಗಮನಿಸಿದ ಕೇಂದ್ರ ಸಮಿತಿಯು ಮಾರ್ಕ್ಸ್, ಏಂಗಲ್ಸ್, ಮತ್ತು ಲೆನಿನರ ತತ್ವಗಳನ್ನು ಜನಪ್ರಿಯಗೊಳಿಸಲು, ಎಲ್ಲಾ ಬಲ ಮತ್ತು ಎಡ ದಾಳಿಗಳಿಂದ ಈ ಬೋಧೆಗಳನ್ನು ಎತ್ತಿ ಹಿಡಿಯಲು ಇಡೀ 1983ನೆಯ ಇಸವಿಯನ್ನು ಉಪಯೋಗಿಸಿಕೊಳ್ಳಬೇಕೆಂದು ಕೇಳಿಕೊಂಡಿದೆ.

ಪಂಜಾಬ್ ಪರಿಸ್ಥಿತಿಯನ್ನು ಕುರಿತ ನಿರ್ಣಯ

[ಏಪ್ರಿಲ್ 5ರಿಂದ 7ರ ವರೆಗೆ (1983) ನಡೆದ ಕೇಂದ್ರ ಸಮಿತಿಯ ಸಭೆ ಅಂಗೀಕರಿಸಿದ ಠರಾವು]

ಪಂಜಾಬಿನಲ್ಲಿ ಅಕಾಲಿ ಪ್ರಕ್ಷೋಭೆಕಾರರ ಮೇಲೆ ಪಂಜಾಬ್ ಪೋಲೀಸರು ವಿವೇಚನೆಯಿಲ್ಲದೆ ಮಾಡಿದ ಗೋಳಿಬಾರು ಮತ್ತು ಬೆತ್ತ ಪ್ರಹಾರಗಳಲ್ಲಿ 26 ಮಂದಿ ಸತ್ತು ನೂರಾರು ಜನರಿಗೆ ಗಾಯಗಳಾಗಿವೆ. ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕೇಂದ್ರ ಸಮಿತಿಯು ಈ ಪೋಲೀಸ್ ಕ್ರಮಗಳನ್ನು ಉಗ್ರವಾಗಿ ಖಂಡಿಸಿ ಏಪ್ರಿಲ್ 4ರಂದು ನಡೆದ ಪೋಲೀಸ್ ಗೋಳೀಬಾರುಗಳು ಮತ್ತು ಬೆತ್ತ ಪ್ರಹಾರಗಳ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಒತ್ತಾಯಿಸುತ್ತದೆ.

ಎಲ್ಲಾ ವಿರೋಧ ಪಕ್ಷಗಳೂ ಸಲಹೆ ಮಾಡಿದಂತೆ ಅಕಾಲಿ ಮುಖಂಡತ್ವದೊಂದಿಗೆ ಸರ್ಕಾರವು ಮಾತುಕತೆಯನ್ನು ಮತ್ತೆ ಪ್ರಾರಂಭಿಸಿದ್ದರೆ ಈ ದುರ್ಘಟನೆಯನ್ನು ತಪ್ಪಿಸಬಹುದಿತ್ತು. ತ್ರಿಪಕ್ಷೀಯ ಮಾತುಕತೆ ನಡೆಯುವಾಗ ಮುಖ್ಯ ಸಮಸ್ಯೆಗೆ ಪರಿಹಾರಗೋಚರಿಸಿದ್ದು ಸಣ್ಣಪುಟ್ಟ ಅಡ್ಡಿಗಳನ್ನು ಗೆಲ್ಲುವುದು ಕಷ್ಟವೇನಾಗಿರಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಆದರೆ ಕೇಂದ್ರ ಸರ್ಕಾರವು ಹಾಗೆ ಮಾಡುವುದಕ್ಕೆ ಬದಲಾಗಿ ಅಕಾಲಿಗಳ ನಡುವೆ ಭಿನ್ನಾಭಿಪ್ರಾಯವನ್ನುಂಟು ಮಾಡುವ ದೃಷ್ಟಿಯಿಂದ ಅಕಾಲಿ ಬೇಡಿಕೆಗಳ ಬಗ್ಗೆ ಏಕಪಕ್ಷೀಯವಾಗಿ ಪ್ರಕಟಣೆಗಳನ್ನು ಹೊರಡಿಸುವ ಧೋರಣೆಯನ್ನು ಅನುಸರಿಸಿತು. ಇದರಿಂದಾಗಿ ಪರಿಸ್ಥಿತಿ ಮತ್ತೂ ಹದಗೆಟ್ಟು ರಾಜ್ಯದ ಶಾಂತಿಯನ್ನು ಭಂಗಪಡಿಸಲು ಹೊರಟಿರುವ ಸಿಖ್ ಉಗ್ರಗಾಮಿಗಳ ಕೈಗಳನ್ನು ಬಲಪಡಿಸಿದೆ.

ಸರ್ಕಾರವು ಸರಿಯಾಗಿ ವ್ಯವಹರಿಸದಿರುವುದರ ಪರಿಣಾಮವಾಗಿ ಮತ್ತು ಹಿಂದು ಹಾಗೂ ಸಿಖ್ ಮತೀಯವಾದಿಗಳು ನಡೆಸುತ್ತಿರುವ ವಿಷಪೂರಿತ ಪ್ರಚಾರದಿಂದಾಗಿ ಪ್ರತ್ಯೇಕತಾವಾದಿ ಶಕ್ತಿಗಳು ವರ್ಧಿಸುವಂತಹ ವಾತಾವರಣವು ಸೃಷ್ಟಿಯಾಗಿ ಗಡಿ ರಾಜ್ಯವಾದ ಪಂಜಾಬಿನಲ್ಲಿ ಪಂಜಾಬಿ ಜನರ ಐಕ್ಯತೆಯನ್ನು ಛಿದ್ರಗೊಳಿಸುವ ಮತೀಯ ಧ್ರುವೀಕರಣ ನಡೆಯುತ್ತಿದೆ. ಆಡಳಿತಕ್ಕೆ ಪಾರ್ಶ್ವವಾಯು ಬಡಿಯುತ್ತಿದೆ. ಅಮೇರಿಕದ ಸಾಮ್ರಾಜ್ಯಶಾಹಿಗಳು ಒಂದು ಕಡೆ ಪಾಕೀಸ್ತಾನದ ಮಿಲಿಟರಿ ಸರ್ವಾಧಿಕಾರಿಯ ಶಸ್ತ್ರೀಕರಣ ಮಾಡುತ್ತಾ ಇನ್ನೊಂದೆಡೆ ನಮ್ಮ ದೇಶದ ಒಳಗೆ ಅಸ್ಥಿರ ಪರಿಸ್ಥಿತಿಯನ್ನು ಉಂಟು ಮಾಡುತ್ತಿರುವಾಗ, ಇಂತಹ ಪರಿಸ್ಥಿತಿಯು ಬೆಳೆಯಲು ಬಿಟ್ಟಿರುವುದು, ದೇಶದ ಐಕ್ಯತೆ ಮತ್ತು ಸಮಗ್ರತೆಗಳನ್ನು ಕಾಪಾಡುವಲ್ಲಿ ಕಾಂಗ್ರೆಸ್ (ಐ) ಆಳುವವರ ವೈಫಲ್ಯ ಮತ್ತು ಘೋರ ದಿವಾಳಿಕೋರತನವನ್ನು ತೋರಿಸುತ್ತದೆ. ಉನ್ನತ ಸ್ಥಾನಗಳಲ್ಲಿರುವ ಅಧಿಕಾರಿಗಳು ತೀವ್ರ ಪ್ರತಿಗಾಮಿ ಶಕ್ತಿಗಳ ಅಣತಿಯ ಮೇರೆಗೆ

(7ನೇ ಪುಟ ನೋಡಿ)

ಮಾನವನ ಭವಿಷ್ಯ

ಡಾ॥ ಪಿ. ಕೆ. ಆರ್. ವಾರಿಯರ್

[ಕಳೆದ ಸಂಚಿಕೆಯಿಂದ]

ಫ್ರಾನ್ಸ್ ದೇಶದಲ್ಲಿ ಈ ಊಳಿಗಮಾನ್ಯ ಪದ್ಧತಿಯನ್ನು ಇದ್ದದ್ದು ಇದ್ದ ಹಾಗೆಯೇ ಚಿತ್ರಿಸಿದ ಮಹಾನ್ ಲೇಖಕ ಎಮಿಲ್‌ಝೋಲಾ (Emilzola), ತನ್ನ ದೇಶಬಿಟ್ಟು ಇಂಗ್ಲೆಂಡಿಗೆ ಓಡಿ ಹೋಗಬೇಕಾಯಿತು.

ಝೋಲಾ ಚಿತ್ರಿಸಿದ ಬದುಕು ಎಂತಹದಾಗಿತ್ತು ?

ತಮ್ಮ ಭೂಮಿಯ ಉದ್ದಗಲಗಳು ಎಷ್ಟು ಎಂದೇ ಗೊತ್ತಿಲ್ಲದಷ್ಟು ವಿಸ್ತಾರವಾದ ಹಿಡುವಳಿಗಳ ಒಡೆಯರಾದ ಪಾಳೆಯಗಾರೀ ಭೂಮಾಲಿಕರು, ತಮ್ಮ ದುರ್ವ್ಯಸನಗಳಿಂದಾಗಿ ತಮ್ಮ ಆಳುಗಳನ್ನು ಹತೋಟಿಯಲ್ಲಿಟ್ಟುಕೊಳ್ಳಲಾರದ ಲಂಪಟ ದನಿಗಳು, ನೆರೆ ದೇಶವಾದ ಜರ್ಮನಿಯ ಭೂಮಾಲಿಕರಿಗೆ ತಮ್ಮ ದೇಶವನ್ನೇ ಒತ್ತೆಯಿಡುವಂತಹ ದಗಾಕೋರರು — ಇದು ಝೋಲಾ ತನ್ನ ಕಾದಂಬರಿಗಳಲ್ಲಿ ಫ್ರಾನ್ಸ್‌ನ ಊಳಿಗಮಾನ್ಯ ಭೂಮಾಲಿಕರನ್ನು ಚಿತ್ರಿಸಿದ ರೀತಿ. ಕಾಲಕ್ರಮೇಣ ಈ ವ್ಯವಸ್ಥೆಯೂ ಕುಸಿದು ಬಿದ್ದಿತು.

ಈ ವ್ಯವಸ್ಥೆಯ ನಂತರ, ಚರಿತ್ರೆಯನ್ನು ಮುನ್ನಡೆಸುವ ಶಕ್ತಿಯಾಗಿ ಬಂದದ್ದು ಔದ್ಯಮಿಕ ಕ್ರಾಂತಿ ಮತ್ತು ಬಂಡವಾಳಶಾಹಿಯ ಉಗಮ. ಬಂಡವಾಳಶಾಹಿ, ಊಳಿಗಮಾನ್ಯ ಪದ್ಧತಿಯ ಕ್ಷುದ್ರತನ, ಲಂಪಟತನಗಳನ್ನು ತೊಡೆದು ಹಾಕಿ "ಲಾಭ ಸಂಪಾದಿಸುವ ಸಭ್ಯ ಮಾರ್ಗ"ಗಳನ್ನು ತೋರಿಸಿಕೊಟ್ಟಿತು.

ಬಹಳ ಕಾಲ ಈ ಮಾರ್ಗಗಳು "ಸಭ್ಯ"ವಾಗಿಯೇ ಉಳಿದಿದ್ದವು ಎಂಬುದರಲ್ಲಿಯೂ ಸಂಶಯವಿಲ್ಲ. ಒಟ್ಟು ಉತ್ಪಾದನೆಯಲ್ಲಿಯೇ ಭಾರಿ ಹೆಚ್ಚಳವಾದದ್ದು ಬಂಡವಾಳಶಾಹಿಯ ಮುಖ್ಯ ಲಕ್ಷಣಗಳಲ್ಲಿ ಒಂದು. ಹೀಗಿರುತ್ತ ಇನ್ನೊಬ್ಬನ ತುತ್ತು ಕಸಿದು ತಿನ್ನುವ, ಇನ್ನೊಬ್ಬನನ್ನು ಕ್ರೌರ್ಯದಲ್ಲಿ ದುಡಿಸುವ ಊಳಿಗಮಾನ್ಯ ಪದ್ಧತಿಯ ನೀಚತನವಾದರೂ ಯಾಕೆ ಬೇಕು ?

ಆದರೆ ಬಂಡವಾಳಶಾಹಿಯ ಈ ಆಕರ್ಷಕವಾದ "ಸಭ್ಯತನ"ದ ಸೊಗಸು ಕೂಡಾ ಬಹುಕಾಲ ಉಳಿಯಲಿಲ್ಲ. ಹೆಚ್ಚು ಹೆಚ್ಚು ಉತ್ಪಾದನೆಯಿಂದ ಹೆಚ್ಚು ಹೆಚ್ಚು ಸಂಪತ್ತು ಸೃಷ್ಟಿಯಾಯಿತೇನೋ ಸರಿ. ಆದರೆ ಅದು ಕೆಲವೇ ಜನರ ಜೇಬುಗಳನ್ನು ಮಾತ್ರ ತುಂಬಿತ್ತು. ಹೀಗಾಗಿ ಬಹು ಜನರು ಹೆಚ್ಚು ಹೆಚ್ಚು ಬಡವರಾಗುತ್ತಲೇ ಹೋದರು.

ಲಾಭ ಸಂಗ್ರಹಿಸುವ ಬಂಡವಾಳಶಾಹಿಗಳು ಮತ್ತು ದಿವಾಳಿಯಾಗುತ್ತ ನಡೆದ ದುಡಿಯುವ ಜನಸಾಮಾನ್ಯರ ನಡುವಿನ ಸಂಘರ್ಷವೂ ಹೆಚ್ಚು ಹೆಚ್ಚು ತೀವ್ರಗೊಂಡಿತು.

ಅಧಿಕಾರ ವ್ಯವಸ್ಥೆ ತನ್ನ ಹುಟ್ಟಿನಿಂದಲೂ ಯಾವ ಹಿತಾಸಕ್ತಿಗಳನ್ನು ಕಾಪಾಡುತ್ತ ಬಂದಿದೆ ಎನ್ನುವುದನ್ನು ನಾವು ನೋಡಿದ್ದೇವೆ. ಈ ಬದಲಾದ ಪರಿಸ್ಥಿತಿಯಲ್ಲಿಯೂ ಅಧಿಕಾರ ವ್ಯವಸ್ಥೆ ಬಂಡವಾಳಶಾಹಿಯ ರಕ್ಷಣೆಗೆ ತನ್ನನ್ನು ಮುಡಿಪಾಗಿ ಇಟ್ಟುಕೊಂಡಿತು.

ಈ ಸನ್ನಿವೇಶದಲ್ಲಿಯೇ ಚಿಕಾಗೋ ನಗರದ ಕೆಲಸಗಾರರು ಮುಷ್ಕರ ಹೂಡಿದರು. ದುಡಿಮೆಯ ಅವಧಿಯನ್ನು 12 ಗಂಟೆಗಳಿಂದ 8 ಗಂಟೆಗಳಿಗೆ ಇಳಿಸಬೇಕು ಎಂಬುದು ಅವರ ಬೇಡಿಕೆಯಾಗಿದ್ದಿತು. ಅಧಿಕಾರ, ಈ ಕೆಲಸಗಾರರನ್ನು ಬಗ್ಗು ಬಡಿಯಿತು, ಕೆಲವರನ್ನು ಕೊಂದಿತು.

ಬಂಡವಾಳಶಾಹಿ ಮತ್ತು ಕೆಲಸಗಾರರ ನಡುವಿನ ನಿರಂತರ ಯುದ್ಧದ ಮೊದಲ ಘಟನೆ ಇದು.

ಅಂದಿನಿಂದ ಈ ಯುದ್ಧ ತೀವ್ರಗೊಳ್ಳುತ್ತಲೇ ಬಂದಿದೆ. 1982ರಲ್ಲಿ ಬಂಡವಾಳಶಾಹೀ ಜಗತ್ತಿನಲ್ಲಿ, 5000ಕ್ಕೂ ಹೆಚ್ಚು ಕಾರ್ಮಿಕರ ಮುಷ್ಕರ ನಡೆದಿವೆಯೆಂದು ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆ ವರದಿ ಮಾಡುತ್ತದೆ.

ಇದು ಬಂಡವಾಳಶಾಹಿ ವ್ಯವಸ್ಥೆಯ ಆಳದಲ್ಲಿರುವ ಬದುಕಿನ ಲಕ್ಷಣ. ಇದು ಅವನತಿಯ ಹಾದಿಯನ್ನು ಹಿಡಿದಿದೆ. ಹಿಂದಿನ ಎಲ್ಲ ಉತ್ಪಾದನಾ ವ್ಯವಸ್ಥೆಗಳಂತೆ, ಬಂಡವಾಳಶಾಹಿಯ ಉತ್ಪಾದನಾ ಶಕ್ತಿಯೂ ಮುಗಿಯುತ್ತ ಬಂದಿದೆ. ಈ ವ್ಯವಸ್ಥೆಯು ಒಳಗಿಂದೊಳಗೇ ಕುಸಿಯುತ್ತಿದೆ. ಬಂಡವಾಳಶಾಹಿ ಈ ಶತಮಾನದಲ್ಲಿ ಮತ್ತೆ ಮತ್ತೆ ಬಿಕ್ಕಟ್ಟುಗಳನ್ನು ಎದುರಿಸುತ್ತಿದೆ. ಮತ್ತೆ ಮತ್ತೆ ಹಣದುಬ್ಬರ ಮತ್ತು ನಿರುದ್ಯೋಗಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳಿಗೆ ಅದರಲ್ಲಿ ಪರಿಹಾರಗಳಿಲ್ಲ.

ಆದ್ದರಿಂದಲೇ ಬಂಡವಾಳಶಾಹಿ ತನ್ನ "ಸಭ್ಯ" ಮುಖವಾಡವನ್ನು ಕಳಚಿಕೊಳ್ಳುತ್ತಿದೆ. ದಗಾಕೋರತನ, ಲಂಚಕೋರತನ, ಲಂಪಟತನ, ವರದಕ್ಷಿಣೆಗಾಗಿ ಸಾವು, ದುಡ್ಡಿಗೋಸ್ಕರ ಏನೂ ಮಾಡಬಹುದು ಎಂಬ ಹೊಸ ನೈತಿಕತೆ ಎಲ್ಲವೂ ಬಂಡವಾಳಶಾಹಿಯ ಒಡಲನ್ನೇ ಹೀರುತ್ತಿವೆ. ಈ ರೋಗಗ್ರಸ್ತ ವ್ಯವಸ್ಥೆಯಲ್ಲಿ ಲಕ್ಷಾಂತರ ಹತಾಶ ಯುವಕರಿಗೆ, ಮಾದಕ ದ್ರವ್ಯಗಳೇ ಏಕೈಕ ನೆಮ್ಮದಿಯ ಆಸರೆಯಾಗಿವೆ.

ಮನುಷ್ಯ ಮೂಲಭೂತವಾಗಿ ದುಷ್ಟನಾಗಿರುವುದರಿಂದ, ಈ ಅವನತಿ ಉಂಟಾದುದಲ್ಲ. ಈ ವ್ಯವಸ್ಥೆಯಲ್ಲಿ ದುಷ್ಟನಾಗದೆ ಬದುಕುವುದೇ ಸಾಧ್ಯವಿಲ್ಲ ಎಂಬ ಪರಿಸ್ಥಿತಿ ಇದೆ.

ಮಾನವನ ಭವಿಷ್ಯದ ಬಗ್ಗೆ ಊಹೆಗಳನ್ನು ಮಂಡಿಸುವ ಮೊದಲು, ನಮ್ಮ ದೇಶದಲ್ಲಿಯೇ ಏನಾಗುತ್ತಿದೆ ಎಂದು ನೋಡೋಣ. ಇದು ಬಹಳ ಮುಖ್ಯ; ಯಾಕೆಂದರೆ ನನ್ನ ತಲೆಮಾರಿನ ಅನೇಕರಿಗೆ, ಈಗ "ಕಾಲ ಕೆಟ್ಟು ಹೋಗಿದೆ, ಮೊದಲಿದ್ದ ಆದರ್ಶಗಳು, ನೀತಿಪರತೆ ಮುಂತಾದವು ಈಗ ಕಾಣೆಯಾಗಿವೆ; ದೇಶ ಜಾರುವ ದಾರಿಯಲ್ಲಿದೆ" ಎನ್ನಿಸತೊಡಗಿದೆ.

35 ವರ್ಷಗಳ ಮೊದಲು, ಈ ದೇಶದಲ್ಲಿ ಕೈ ಬೆರಳಲ್ಲಿ ಎಣಿಸುವಷ್ಟು ದೊಡ್ಡ ಉದ್ಯಮಪತಿಗಳು ಇದ್ದರು. ಆದರೆ ಇವತ್ತು ಅವರ ಸಂಖ್ಯೆ ಮತ್ತು ಅವರ ಆಸ್ತಿ 30ಪಟ್ಟು ಜಾಸ್ತಿ ಆಗಿದೆ.

ಆದರೆ ಇದೇ ವೇಳೆ ಈ ಭಾರೀ ಉದ್ಯಮಪತಿಗಳನ್ನು ಎದುರಿಸಲಾರದೆ ಅನೇಕ ಉದ್ಯಮಗಳು ದಿವಾಳಿ ತೆಗೆದಿವೆ; ಕೆಲವು ಉದ್ಯಮಗಳು ಸರಕಾರ ಹೇಳುವಂತೆ "ರೋಗಗ್ರಸ್ತ"ವಾಗಿವೆ.

ಮೊದಲಿನಿಂದಲೂ ಇದ್ದ ಭಾರೀ ಉದ್ಯಮಪತಿಗಳು ಈಗ ನಮ್ಮ ಅರ್ಥಶಾಸ್ತ್ರಜ್ಞರ ಭಾಷೆಯಲ್ಲಿ ಹೇಳುವುದಾದರೆ, "ಏಕಸ್ವಾಮ್ಯ ಬಂಡವಾಳಶಾಹಿ"ಗಳಾಗಿ ಬೆಳೆದಿದ್ದಾರೆ, ಅಂದರೆ ಅವರು ಈ ದೇಶದ ಇಡೀ ಮಾರುಕಟ್ಟೆಯನ್ನು ನಿಯಂತ್ರಿಸಬಲ್ಲ ಶಕ್ತಿಗಳಾಗಿದ್ದಾರೆ. ಆದ್ದರಿಂದ ಅವರೇ ನಮ್ಮ ನಿಜವಾದ "ಪ್ರಭು"ಗಳು.

ನಮ್ಮ ರಾಜಕೀಯ ಅಧಿಕಾರ ವ್ಯವಸ್ಥೆ ಈ "ಪ್ರಭು"ಗಳ ಮರ್ಜಿ ಹಿಡಿಯುತ್ತಿದೆ.

ಇದು ಹೇಗೆ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ನೋಡೋಣ. ನಮ್ಮ ಸರಕಾರದ ಉದ್ಯಮಗಳ ಲೈಸೆನ್ಸುಗಳ ಕಾಯಿದೆಯನ್ನೇ ತೆಗೆದುಕೊಳ್ಳಿ. ಈ ಲೈಸೆನ್ಸುಗಳ ವಿಲೇವಾರಿಯಲ್ಲಿ ಬೃಹತ್ ಪ್ರಮಾಣದ ಅಕ್ರಮ, ಭ್ರಷ್ಟಾಚಾರಗಳು ನಡೆಯುತ್ತವೆ ಎಂಬುದು ನಮಗೆಲ್ಲ ಚೆನ್ನಾಗಿ ಗೊತ್ತಿರುವ ವಿಷಯ. ನೀವು ಒಂದು ಉದ್ಯಮವನ್ನು ಪ್ರಾರಂಭಿಸಬೇಕೆಂದಿದ್ದರೆ; ಅದಕ್ಕೆ ಸರಕಾರಕ್ಕೆ ಸಲ್ಲಿಸಬೇಕಾದ ಒಂದು ರುಸುಂ ಇದೆ. ಆದರೆ ಅಷ್ಟು ಸಾಕೆ ? ಇದರ ಜೊತೆಗೆ ನೀವು ಸಂಬಂಧಪಟ್ಟ ಅಧಿಕಾರಿಗಳಿಗೆ ಲಂಚವನ್ನೂ ಕೊಡಬೇಕು. ನೀವು ಲಂಚ ಕೊಡಲು ನಿರಾಕರಿಸುವ ಸತ್ಯಸಂಧರಾದರೆ ನಿಮ್ಮ ಅರ್ಜಿ ಮೂಲೆ ಪಾಲಾಗುತ್ತದೆ. ನೀವು ಮೇಲಧಿಕಾರಿಗಳಿಗೆ ದೂರು ಒಯ್ಯುತ್ತೀರಿ. ಅದರಿಂದಲೂ ಪ್ರಯೋಜನವಾಗುದಿಲ್ಲ. ನೀವು ಅರ್ಜಿ ಕೊಡುವ ಅಧಿಕಾರಿಯ ಅಂತಸ್ತು ಜಾಸ್ತಿಯಾದಷ್ಟೂ ನೀವು ಕೊಡಬೇಕಾದ ಲಂಚದ ಪ್ರಮಾಣ ಅಷ್ಟೇ ಜಾಸ್ತಿಯಾಗುತ್ತದೆ; ನಿಮಗೆ ನ್ಯಾಯ ದೊರೆಯುವುದಿಲ್ಲ.

ಉದಾಹರಣೆಗಳೇ ಅನಗತ್ಯ ಎನ್ನುವಷ್ಟರಮಟ್ಟಿಗೆ ಈ ಭ್ರಷ್ಟಾಚಾರ ಬೆಳೆದಿದೆ.

ಬಂಡವಾಳಶಾಹೀ ವ್ಯವಸ್ಥೆ, ಎಲ್ಲವನ್ನೂ ಮಾರಾಟ ಮಾಡಬಹುದು ಮತ್ತು ಲಾಭಗಳಿಸಬಹುದು ಎಂಬ ತತ್ವದ ಮೇಲೆ ನಿಂತಿದೆ. ಅವಶ್ಯ ಬಿದ್ದರೆ, ಅದು ಲಾಭಕ್ಕೋಸ್ಕರ ಮನುಷ್ಯರನ್ನೂ, ಭಾವನೆಗಳನ್ನೂ ಕೂಡಾ ಮಾರಾಟ ಮಾಡುತ್ತದೆ. ಅಪ್ರಾಮಾಣಿಕತೆಯಲ್ಲಿಯೇ ಲಾಭವಿರುವಾಗ ಪ್ರಾಮಾಣಿಕತೆ ಯಾರಿಗೆ ಬೇಕು? ಆದ್ದರಿಂದ "ಪ್ರಾಮಾಣಿಕತೆಯನ್ನು ಬಿಟ್ಟುಕೊಡು. ಲಾಭಗಳಿಸು" — ಇದೇ ಬಂಡವಾಳಶಾಹಿಯ ಮಹೋನ್ನತ ನೀತಿ ಸೂತ್ರ.

ಈ ಅಧಃಪತನಕ್ಕೆ ಒಂದೇ ಮದ್ದು. ಈ ವ್ಯವಸ್ಥೆಯನ್ನೇ, ಬುಡಬೇರು ಸಹಿತ ಕಿತ್ತು ಎಸೆಯಬೇಕು. ಮತ್ತು ಹೊಸ ವ್ಯವಸ್ಥೆಯೊಂದನ್ನು ರೂಪಿಸಿಕೊಳ್ಳಬೇಕು,

ಸಮಾಜವಾದವೇ ಆ ಹೊಸ ವ್ಯವಸ್ಥೆ.

ಸಮಾಜವಾದ ಎಂದರೆ "ನಮ್ಮ ದೇಶದ ಎಲ್ಲ ರಾಜಕೀಯ ಪಕ್ಷಗಳೂ ಪದೇ ಪದೇ ಹೇಳುತ್ತ ಬಂದ ಅದೇ ಹಳಸಲು ವಿಚಾರವಲ್ಲವೆ?" ಎಂದು ಕೆಲವರು ಕೇಳಬಹುದು.

ಇನ್ನು ಕೆಲವರು, ಪಂಡಿತರು ಎಂದು ತಮ್ಮನ್ನು ತಾವೇ ಪರಿಗಣಿಸಿಕೊಂಡವರು, "ಸಮಾಜವಾದವೆಂದರೆ ನಿರಂಕುಶ ಪ್ರಭುತ್ವವಲ್ಲವೆ ? ಅದು ಹೇಗೆ ಪ್ರಜಾಸತ್ತಾತ್ಮಕವಾಗಿ ಇರಬಲ್ಲದು ?" ಎಂದು ಕೇಳಬಹುದು.

ಈಗಾಗಲೇ ನಾವು "ರಾಜ್ಯ ವ್ಯವಸ್ಥೆ, ಕೇಂದ್ರೀಕೃತ ಅಧಿಕಾರ, ಪ್ರಭುತ್ವ"ಗಳ ಪರಿಕಲ್ಪನೆಗಳನ್ನು ಪರಿಶೀಲಿಸಿದ್ದೇವೆ. ಅವುಗಳ ನಿಜಸ್ವರೂಪವನ್ನು ವಿಶ್ಲೇಷಿಸಿದ್ದೇವೆ. ಚರಿತ್ರೆಯುದ್ದಕ್ಕೂ ಪ್ರಭುತ್ವದ ಶಕ್ತಿ ಮಾನವ್ಯದ ಒಂದು ಸಣ್ಣ ವಿಭಾಗದ ಹಿತಾಸಕ್ತಿಗಳನ್ನು ಮಾತ್ರ ರಕ್ಷಿಸಿ, ಜನತೆಯ ದೊಡ್ಡ ವಿಭಾಗವೊಂದನ್ನು ಸದಾ ದುಡಿಮೆಯ ತೊತ್ತುಗಳಾಗಿ ಇರಿಸಿದ್ದನ್ನು ನಾವು ನೋಡಿದ್ದೇವೆ.

ಯಾವುದೇ ಸಮಾಜ ವ್ಯವಸ್ಥೆಯೂ ಒಪ್ಪಂದದಲ್ಲಿ ಇಡಿಯಾಗಿ ಉಳಿಯಬೇಕಾದರೆ ಆ ವ್ಯವಸ್ಥೆಯ ಎಲ್ಲ ಜನವಿಭಾಗಗಳಲ್ಲಿ ಜೊತೆ ಜೊತೆಯಾಗಿರಬೇಕು. ಗುಲಾಮ ವ್ಯವಸ್ಥೆಯಲ್ಲಿ ಗುಲಾಮರು ಮತ್ತು ಗುಲಾಮರ ಒಡೆಯರು ಒಪ್ಪಂದದಲ್ಲಿ ಇರಬೇಕು. ಗುಲಾಮರು, ಅವರ ಒಡೆಯರ ವಿರುದ್ಧ ತಿರುಗಿ ಬಿದ್ದರು ಎನ್ನಿ, (ಅದು ಸಹಜ ತಾನೆ !) ಆಗ ಗುಲಾಮ ವ್ಯವಸ್ಥೆಯ ಸ್ವರೂಪವೇ ಬದಲಾಗುತ್ತದೆ.

ಊಳಿಗಮಾನ್ಯ ವ್ಯವಸ್ಥೆಯೂ ಭೂಮಾಲಿಕರು ಮತ್ತು ಅವರ ಕೆಲಸಗಾರರು ಜೊತೆ ಜೊತೆಯಾಗಿರುವಷ್ಟು ಕಾಲ ಮಾತ್ರ ಮುಂದುವರಿಯಿತು. ಈ ಒಪ್ಪಂದ ನಾಶವಾದಾಗ, ಈ ವ್ಯವಸ್ಥೆಯೂ ನಾಶವಾಯಿತು.

ಬಂಡವಾಳಶಾಹೀ ವ್ಯವಸ್ಥೆಯಲ್ಲಿ ಬಂಡವಾಳಶಾಹಿಗಳು ಮತ್ತು ಶ್ರಮಜೀವಿಗಳಿದ್ದಾರೆ.

ಈ ಎರಡು ಮುಖ್ಯ ವರ್ಗಗಳ ನಡುವೆ, ವಕೀಲರು, ವೈದ್ಯರು, ಇಂಜಿನಿಯರುಗಳು, ಶಿಕ್ಷಕರು ತಂತ್ರಜ್ಞರು, ಗುಮಾಸ್ತರು ಮುಂತಾದ ವಿವಿಧ ವೃತ್ತಿಗಳ ಜನರಿದ್ದಾರೆ. ಆದರೆ ಈ ಜನರ ಆಶೋತ್ತರಗಳು ಚರಿತ್ರೆಯ ಗತಿಯನ್ನು ಬದಲಾಯಿಸುವಷ್ಟು ಶಕ್ತಿಯುತವಾದವುಗಳಲ್ಲ. ಅವರು ಸಮಾಜದ ಯಾವುದೇ ಮುಖ್ಯ ವರ್ಗದೊಡನೆಯೂ ನೇರ ಸಂಪರ್ಕ ಹೊಂದಿರದ ಕಾರಣ ಅವರಷ್ಟಕ್ಕೆ ಅವರು ವ್ಯವಸ್ಥೆಯನ್ನು ಒಳ್ಳೆಯದಕ್ಕಾಗಲೀ, ಕೆಟ್ಟದ್ದಕ್ಕಾಗಲೀ ಬದಲಾಯಿಸಲಾರರು.

ಆದರೆ ಈ ವ್ಯವಸ್ಥೆಯನ್ನು ಬದಲಾಯಿಸಲು, ಈ ವೃತ್ತಿನಿರತ ಜನ (ಅಂದರೆ ನಮ್ಮಂತಹವರು) ಶಕ್ತರಲ್ಲದಿದ್ದರೂ, ಈ ಸಮಾಜದ ಎಲ್ಲ ಅನಿಷ್ಟಗಳನ್ನೂ, ಹೆಚ್ಚು ಅನುಭವಿಸುವವರೂ ಇದೇ ಜನಗಳು.

ಸಮಾಜವಾದವೆಂದರೆ, ಹಲವು ಘಟ್ಟಗಳಲ್ಲಿ ನಡೆಯುವ ಸಮಾಜದ ಆಮೂಲಾಗ್ರ ಬದಲಾವಣೆ.

ಸಮಾಜವಾದವೆಂದರೆ, ಅಧಿಕಾರ ವ್ಯವಸ್ಥೆಯನ್ನು ಕೆಲವೇ ಜನರು ನಿರ್ವಹಿಸುವುದರ ಬದಲು, ಜನತೆಯ ಅತಿ ದೊಡ್ಡ ವಿಭಾಗ, ಅಂದರೆ ದುಡಿಯುವ ವರ್ಗ ನಿಯಂತ್ರಿಸುವುದು.

ದುಡಿಯುವ ವರ್ಗವೆಂದರೆ ಕೇವಲ ದೈಹಿಕ ಶ್ರಮದ ಕೆಲಸಗಾರರು ಮಾತ್ರವಲ್ಲ; ಮಾನಸಿಕ ಶ್ರಮದಿಂದ ಜೀವನ

(6ನೇ ಪುಟ ನೋಡಿ)

ಚೀಣಾ ಭೇಟಿ ಕುರಿತು....

ಸಿ.ಪಿ.ಐ. (ಎಂ)ನ ಕೇಂದ್ರ ಸಮಿತಿ, ಪಕ್ಷದ ನಿಯೋಗದ ಚೀಣಾ ಭೇಟಿ ಕುರಿತು ದಿನಾಂಕ 21-5-1983ರಂದು ಈ ಕೆಳಗಿನ ಪತ್ರಿಕಾ ಪ್ರಕಟಣೆ ನೀಡಿದೆ:

ಚೀಣಾ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಯ ಆಹ್ವಾನದ ಮೇರೆಗೆ ಪ್ರಧಾನ ಕಾರ್ಯದರ್ಶಿ ಇ. ಎಂ. ಎಸ್. ನಂಬೂದಿರಿಪಾಡ್ ಹಾಗೂ ಪಾಲಿಟ್‌ಬ್ಯೂರೋ ಸದಸ್ಯರುಗಳಾದ ಎಂ. ಬಸವಪುನ್ನಯ್ಯ ಹಾಗೂ ಹರ್‌ಕಿಶನ್‌ಸಿಂಗ್ ಸುರಜೀತ್‌ರನ್ನೊಳಗೊಂಡ ಸಿ.ಪಿ.ಐ. (ಎಂ)ನ ತ್ರಿಸದಸ್ಯ ನಿಯೋಗ ಚೀಣಾ ಜನತಾಗಣರಾಜ್ಯಕ್ಕೆ ಭೇಟಿ ನೀಡಿ ಅಲ್ಲಿ 19 ದಿನಗಳನ್ನು ಕಳೆದರು; ಚೀಣಾ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ಹೂಯಾಫೋಬಾಂಗ್‌ರ ನೇತೃತ್ವದ ನಿಯೋಗದೊಂದಿಗೆ 3 ದಿನಗಳ ಕಾಲ ವಿಚಾರ ವಿನಿಮಯದ ಫಲವಾಗಿ 1967ರಿಂದ ಅವಮಾನತ್ತಿನಲ್ಲಿದ್ದ ಎರಡು ಪಕ್ಷಗಳ ನಡುವಿನ ಸೋದರ ಸಂಬಂಧಗಳನ್ನು ಮತ್ತೆ ಸ್ಥಾಪಿಸಲು ಒಪ್ಪಂದಕ್ಕೆ ಬರುವಂತಾಯಿತು.

ಮಾತುಕತೆಯ ಕೊನೆಯಲ್ಲಿ ಹೊರಡಿಸಿದ ಪತ್ರಿಕಾ ಪ್ರಕಟಣೆ "ಕಳೆದ ಕೆಲವು ದಿನಗಳಲ್ಲಿ ಮಾತುಕತೆ ಪ್ರಾಮಾಣಿಕ ಹಾಗೂ ಸ್ನೇಹಪೂರ್ಣ ವಾತಾವರಣದಲ್ಲಿ ನಡೆಯಿತು. ಹಲವು ವಿಷಯಗಳ ಬಗ್ಗೆ ವ್ಯಾಪಕ ಪ್ರಮಾಣದ ಬಗ್ಗೆ ವಿಚಾರ ವಿನಿಮಯ ನಡೆದು ಒಪ್ಪಂದಕ್ಕೆ ಬರಲಾಯಿತು. ಇನ್ನೂ ಕೆಲವು ವಿಷಯಗಳ ಬಗ್ಗೆ ಭಿನ್ನ ಅಭಿಪ್ರಾಯಗಳು ಬಂದರೂ ಅವು ಎರಡೂ ಪಕ್ಷಗಳ ನಡುವೆ ಸಂಬಂಧಗಳನ್ನು ಪುನರ್‌ಸ್ಥಾಪಿಸುವಲ್ಲಿ ಹಾಗೂ ವಿಸ್ತರಿಸುವಲ್ಲಿ ಅಡ್ಡಿಯಾಗಲಾರವು. ಈ ಎರಡು ದೇಶಗಳು ಹಾಗೂ ಚೀಣಾ ಮತ್ತು ಭಾರತದ ಜನತೆಗಳ ನಡುವೆ ಸ್ನೇಹ ಬೆಳೆಸಲು ಎರಡೂ ಪಕ್ಷಗಳು ದೃಢ ನಿರ್ಧಾರ ಮಾಡಿವೆ" ಎಂದು ಹೇಳಿದೆ. ಪರಸ್ಪರ ಸಂಬಂಧಗಳನ್ನು ಪುನರ್‌ಸ್ಥಾಪಿಸಿರುವುದರ ಆಧಾರ "ಸ್ವಾತಂತ್ರ್ಯ, ಸಂಪೂರ್ಣ ಸಮಾನತೆ, ಪರಸ್ಪರ ಗೌರವ ಹಾಗೂ ಪರಸ್ಪರರ ಆಂತರಿಕ ವ್ಯವಹಾರಗಳಲ್ಲಿ ಮಧ್ಯ ಪ್ರವೇಶಿಸದಿರುವುದು-ಈ ನೀತಿಗಳು" ಎಂದು ಪ್ರಕಟಣೆ ತಿಳಿಸಿದೆ.

ಅವಿಭಜಿತ ಸಿ. ಪಿ. ಐ.ನಲ್ಲಿ ಒಡಕು ಬಂದು 1964ರಲ್ಲಿ ಸಿ.ಪಿ.ಐ. (ಎಂ) ರಚನೆಗೊಂಡಂದಿನಿಂದ ಪಕ್ಷವು 1964ರಲ್ಲಿ ಏಳನೇ ಅಧಿವೇಶನ ಅಂಗೀಕರಿಸಿದ ಕಾರ್ಯಕ್ರಮದಲ್ಲಿ ಹೇಳಿದಂತೆ "ಹೊಸ ಯುಗ ಉಂಟು ಮಾಡಿರುವ ಸಾಧ್ಯತೆಗಳನ್ನು ಜಗತ್ತಿನಾದ್ಯಂತ ಪ್ರತಿಯೊಂದು ದೇಶದಲ್ಲಿ ವಾಸ್ತವರೂಪಕ್ಕಿಳಿಸಲು ಸಾಧ್ಯವಾಗಬೇಕಾದರೆ ಅದು ಅಂತರ್‌ರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಯ ಐಕ್ಯತೆಯನ್ನು ಬಲಪಡಿಸಿದಾಗ ಮಾತ್ರ" ಎಂದು ಅದಕ್ಕಾಗಿ ಶ್ರಮಿಸುತ್ತಾ ಬಂದಿದೆ. ಈ ವಿಷಯವನ್ನು ಭಾರತದ ನಿಯೋಗ ಚೀಣಾದ ಸಂಗಾತಿಗಳಿಗೆ ತಿಳಿಸಿತು.

ಅಂತರ್‌ರಾಷ್ಟ್ರೀಯ ಕಮ್ಯೂನಿಸ್ಟ್ ಚಳವಳಿಯಲ್ಲಿ ಮತ್ತೆ ಐಕ್ಯತೆಯನ್ನು ತರುವ ಮಾರ್ಗದಲ್ಲಿ ಸಿ.ಪಿ.ಐ. (ಎಂ) ಅಗಣಿತ ಅಡ್ಡಿ ಆತಂಕಗಳನ್ನೆದುರಿಸಬೇಕಾಯಿತು. ಯಾಕೆಂದರೆ ಸೋವಿಯತ್ ಪಕ್ಷದ್ದಾಗಲೀ, ಚೀಣಾ ಪಕ್ಷದ್ದಾಗಲೀ ನಿಲುವನ್ನು ಒಪ್ಪಿಕೊಳ್ಳಲು ಅದಕ್ಕೆ ಸಾಧ್ಯವಾಗಲಿಲ್ಲ. ಆದರೂ ನಾವು ಚೀಣಾ ವಿರೋಧೀ ನಿಲುವಾಗಲೀ ಅಥವಾ ಸೋವಿಯತ್‌ವಿರೋಧಿ ನಿಲುವಾಗಲೀ ತಳೆಯಲು ನಿರಾಕರಿಸಿದೆವು. ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧ ಸತತವಾದ, ನೀತಿಬದ್ಧ ಹೋರಾಟ ಹಾಗೂ ಯುದ್ಧಾಪಾಯದ ವಿರುದ್ಧ ನಮ್ಮ ಜನತೆಯ ಸಂಘಟನೆ ಇವು ನಮ್ಮ ರಾಷ್ಟ್ರೀಯ ಹಾಗೂ ಅಂತರ್‌ರಾಷ್ಟ್ರೀಯ ಧೋರಣೆಗಳ ತಿರುಳು. ಸಮಾಜವಾದೀ ಪಾಳಿಯದ ಅಸ್ತಿತ್ವ ಹಾಗೂ ಇದರ ಮತ್ತು ಬಂಡವಾಳಶಾಹೀ ಜಗತ್ತಿನ ನಡುವಿನ ಮೂಲಭೂತ ವೈರುಧ್ಯ—ಇದೇ ಸಮಕಾಲೀನ ಜಗತ್ತಿನ ವಾಸ್ತವತೆಯ ಕೇಂದ್ರ ಬಿಂದು ಎಂದು ನಾವು ಸದಾ ಪರಿಗಣಿಸಿದ್ದೇವೆ. ಜಗತ್ತಿನಲ್ಲಾಗಲೀ, ನಮ್ಮ ದೇಶದಲ್ಲಾಗಲೀ ಸಮಾಜವಾದದ ಶತ್ರುಗಳು ಯಾವುದೇ ಸಮಾಜವಾದೀ ದೇಶಗಳ ಮೇಲೆ ದಾಳಿ ನಡೆಸಿದಾಗ ಆ ದೇಶದ ರಕ್ಷಣೆಗೆ ನಿಲ್ಲುವುದು ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯತೆಯ ದೃಷ್ಟಿಯಿಂದ ಅತೀ ಅಗತ್ಯ.

ಜಾಗತಿಕ ಕಮ್ಯೂನಿಸ್ಟ್ ಚಳವಳಿಯ ವಿವಿಧ ತುಕಡಿಗಳಲ್ಲಿ ಭಿನ್ನಾಭಿಪ್ರಾಯ ಬರಲು ಮೊದಲ ಕಾರಣ, ಅವುಗಳಲ್ಲಿ ಕೆಲವು ತಮ್ಮ ದೇಶಗಳಲ್ಲಿ ಆಳುವ ಪಕ್ಷಗಳಾಗಿ, ಉಳಿದವು ತಮ್ಮ ದೇಶಗಳ ಆಳುವ ಸರಕಾರಗಳ ವಿರುದ್ಧ ಹೋರಾಟ ನಡೆಸಬೇಕಾಗಿ ಬಂದದ್ದು, ಹಾಗೂ ಎರಡನೆಯದಾಗಿ ಪ್ರತಿಯೊಂದು ದೇಶವೂ ತನ್ನದೇ ಆದ ರಾಷ್ಟ್ರೀಯ ವೈಶಿಷ್ಟ್ಯ ಹೊಂದಿರುವುದು ಎಂಬ ಅಭಿಪ್ರಾಯವನ್ನು ನಿಯೋಗ ವ್ಯಕ್ತಪಡಿಸಿತು.

ಆದ್ದರಿಂದ ಈ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಲು ಪ್ರತಿಯೊಂದು ಪಕ್ಷವೂ ದ್ವಿಪಕ್ಷೀಯವಾಗಿ ಅಥವಾ ಬೇರೆ ರೀತಿಗಳಲ್ಲಿ ಸಾಧ್ಯವಾದ ಎಲ್ಲ ಪ್ರಯತ್ನ ನಡೆಸುವುದು ಅಗತ್ಯ. ಕೈಲಾದ ಮಟ್ಟಿಗೆ ಒಂದು ಪಕ್ಷ ಇನ್ನೊಂದು ಪಕ್ಷವನ್ನು ಬಹಿರಂಗವಾಗಿ ಟೀಕಿಸಬಾರದು. ಆದರೆ ಸೈದ್ಧಾಂತಿಕ ವಿಷಯಗಳಲ್ಲಿ ಎರಡು ಅಥವಾ ಹೆಚ್ಚು ಪಕ್ಷಗಳ ನಡುವೆ ಭಿನ್ನಾಭಿಪ್ರಾಯಗಳಿದ್ದು ಒಂದು ಪಕ್ಷ ತನ್ನ ಸದಸ್ಯರು ಹಾಗೂ ಸಾಮೂಹಿಕ ಬೆಂಬಲಿಗರಿಗೆ ಆ ಬಗ್ಗೆ ಶಿಕ್ಷಣ ನೀಡುವುದು ಅಗತ್ಯ ಎಂದು ಭಾವಿಸಿದಾಗ ಅದು ತನ್ನ ಅಭಿಪ್ರಾಯಗಳನ್ನು ಹಾಗೂ ಟೀಕೆಗಳನ್ನು ಮಾಡಬಹುದು.

ಇಷ್ಟೇ ಅಲ್ಲ ಈ ದೇಶಗಳಲ್ಲಿ ಪತ್ರಿಕೆ ಹಾಗೂ ಇತರ ಪ್ರಚಾರ ಮಾಧ್ಯಮಗಳು ಅಲ್ಲಿನ ಬೂರ್ಜ್ವಾ ವರ್ಗದ ಹತೋಟಿಯಲ್ಲಿರುವುದರಿಂದ, ಸಮಕಾಲೀನ ರಾಜಕೀಯ ಸಮಸ್ಯೆಗಳ ಬಗ್ಗೆ ಈ ದೇಶಗಳ ಕಾರ್ಮಿಕ ವರ್ಗದ ಪಕ್ಷಗಳು ಜನತೆಯ ಸಮ್ಮುಖದಲ್ಲಿ ತಮ್ಮ ಅಭಿಪ್ರಾಯಗಳನ್ನು ತಾವು ಭಿನ್ನಾಭಿಪ್ರಾಯ ಹೊಂದಿರುವ ಸಮಾಜವಾದಿ ದೇಶಗಳನ್ನು ಕುರಿತಂತೆಯೂ ವ್ಯಕ್ತಪಡಿಸಬೇಕಾಗಿ ಬರುತ್ತದೆ ಎಂಬುದನ್ನು ಅರಿಯಬೇಕು.

ಆದ್ದರಿಂದ ಈ ದೇಶಗಳಲ್ಲಿನ ಪಕ್ಷಗಳು ಹಾಗೂ ಸಮಾಜವಾದಿ ದೇಶಗಳ ಆಳುವ ಪಕ್ಷಗಳು ದ್ವಿಪಕ್ಷೀಯ ಅಥವಾ ಬೇರೆ ತರದ ವಿಚಾರ ವಿನಿಮಯ ನಡೆಸುವುದು ಅತ್ಯಗತ್ಯ. ಇದರಿಂದ ಪರಸ್ಪರ ತಿಳುವಳಿಕೆ ಸಾಧ್ಯವಾಗುತ್ತದೆ.

ಅಂತರ್‌ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪ್ರಶ್ನೆಗಳ ಕುರಿತು ಸಿ. ಪಿ. ಐ. (ಎಂ) ತಳೆದ ನಿಲುವು 19 ವರ್ಷಗಳ ಹಿಂದೆ ಅಂಗೀಕರಿಸಿದ ಪಕ್ಷದ ಕಾರ್ಯಕ್ರಮದಲ್ಲಿ, ನಂತರದ ಪಕ್ಷದ ಅಧಿವೇಶನಗಳು, ಕೇಂದ್ರ ಸಮಿತಿ ಹಾಗೂ ಪಾಲಿಟ್‌ಬ್ಯೂರೋ ಪ್ಲೀನರಿ ಸಭೆಗಳ ದಾಖಲೆಗಳಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ಈ ದಾಖಲೆಗಳನ್ನು ಪರಿಶೀಲಿಸಿದರೆ ಕೆಲವು ಮಹತ್ವದ ಅಂತರ್‌ರಾಷ್ಟ್ರೀಯ ಹಾಗೂ ರಾಷ್ಟ್ರೀಯ ರಾಜಕೀಯಗಳ ಕುರಿತು ಚೀಣಾ ಕಮ್ಯೂನಿಸ್ಟ್ ಪಕ್ಷದ ಅಭಿಪ್ರಾಯಗಳನ್ನು ಒಪ್ಪಲು ಸಾಧ್ಯವಾಗಲಿಲ್ಲ ಎಂಬುದನ್ನು ಕಾಣಬಹುದು ಎಂದು ಚೀಣೀ ಪಕ್ಷಕ್ಕೇ ನಿಯೋಗ ತಿಳಿಸಿತು.

ನಮ್ಮ ಅಭಿಪ್ರಾಯಗಳನ್ನು ಭಾರತದ ಜನತೆಯ ಸಮ್ಮುಖ ಇರಿಸಬೇಕಾಗಿ ಬಂದಾಗಲೂ 1950ರ ಪೂರ್ವಾರ್ಧದಲ್ಲಿ ಏರ್ಪಟ್ಟ ಭಾರತ-ಚೀಣಾ ಸ್ನೇಹ ಸಂಬಂಧಗಳನ್ನು ಉಳಿಸಿ, ಬಲಪಡಿಸುವುದು ಮಹತ್ವದ ಸಂಗತಿ ಎಂದು ಸದಾ ನಾವು ಪರಿಗಣಿಸಿದ್ದೇವೆ. ಭಾರತದ ಸಾರ್ವಜನಿಕರ ಕೆಲವು ವಿಭಾಗಗಳ ಕಡು ವಿರೋಧ ಹಾಗೂ ಸರಕಾರದ ಕೋಪೋದ್ರಿಕ್ತ ಆಡಳಿತ ಕ್ರಮಗಳನ್ನೆದುರಿಸಿ ನಾವು ಇದನ್ನು ಮಾಡಬೇಕಾಯಿತು. ನಮ್ಮ ದೇಶದ ರಾಷ್ಟ್ರೀಯ ಸಂಕುಚಿತವಾದಿಗಳು ಯಾವುದೇ ಸಮಾಜವಾದಿ ದೇಶದ ವಿರುದ್ಧ ಸಾರ್ವಜನಿಕ ಭಾವೋದ್ರೇಕ ಹುಟ್ಟಿಸಲು ಅವಕಾಶ ನೀಡದಂತೆ ನೋಡಿಕೊಳ್ಳುವುದು ಅಂತರ್‌ರಾಷ್ಟ್ರೀಯ ಚಳವಳಿ ಹಾಗೂ ನಮ್ಮ ಆಂತರಿಕ ಹೋರಾಟದ ಪ್ರತಿ ನಾವು ನಿರ್ವಹಿಸಬೇಕಾದ ಕರ್ತವ್ಯ ಎಂದು ನಾವು ಭಾವಿಸುತ್ತೇವೆ. ಸ್ವಾಭಾವಿಕವಾಗಿಯೇ ಎಲ್ಲಾ ಸಮಾಜವಾದಿ ದೇಶಗಳ ಬಗೆಗೂ ಇದೇ ನಿಲುವು ತಳೆಯುತ್ತೇವೆ.

ಸಾಂಸ್ಕೃತಿಕ ಕಾರ್ಯಕ್ರಮದ ಅವಧಿಯ ತಪ್ಪುಗಳನ್ನು ಕೊನೆಗೊಳಿಸಲು ಹಾಗೂ ನಿರ್ದಿಷ್ಟ ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಸನ್ನಿವೇಶದಲ್ಲಿ ಚೀಣಾದ ವಿಶಿಷ್ಟ ಹಾಗೂ ವಾಸ್ತವ ಪರಿಸ್ಥಿತಿಗಳಿಗೆ ಅನುಗುಣವಾಗಿ ದೇಶದಲ್ಲಿ ಸಮಾಜವಾದವನ್ನು ಕಟ್ಟುವ ಸರಿಯಾದ ಹಾಗೂ ವೈಜ್ಞಾನಿಕವಾದ ಮಾರ್ಗದಲ್ಲಿ ತಂದಿರಿಸಲು ಚೀಣಾ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿ ನಡೆಸಿದ ತೀವ್ರ ಹೋರಾಟದ ಬಗ್ಗೆ ಮೆಚ್ಚುಗೆ ಹಾಗೂ ಬೆಂಬಲವನ್ನು ನಿಯೋಗ ವ್ಯಕ್ತಪಡಿಸಿತು. ಈ ಕ್ರಮಗಳು ಚೀಣಾದಲ್ಲಿ ಸಮಾಜವಾದೀ ರಚನೆಯ ವೇಗವನ್ನು ಹೆಚ್ಚಿಸಿ ಅದು ಜಗತ್ತಿನಾದ್ಯಂತ ಬಂಡವಾಳಶಾಹಿಯ ವಿರುದ್ಧ ಹಾಗೂ ಮಾನವಕುಲ ಸಮಾಜವಾದದತ್ತ ಪರಿವರ್ತನೆ ಸಾಧಿಸುವಲ್ಲಿ ಒಂದು ಬೆಲೆ ಬಾಳುವ ಕೊಡುಗೆಯಾಗುತ್ತದೆಯೆಂಬ ಆಶಯವನ್ನು ವ್ಯಕ್ತಪಡಿಸಲಾಯಿತು. ನೂರು ಕೋಟಿ ಜನಬಲವಿರುವ ಜನತಾ ಚೀಣಾದಲ್ಲಿ ಸಮಾಜವಾದ ಕಟ್ಟುವಲ್ಲಿ ಸಾಧಿಸಿದ ಪ್ರತಿಯೊಂದು ವಿಜಯವೂ ಸಿ. ಪಿ. ಐ. (ಎಂ)ಗೆ ಹಾಗೂ ಭಾರತೀಯ ಜನತೆಗೆ ಹರ್ಷವನ್ನುಂಟು ಮಾಡುತ್ತದೆ.

ಎಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಏರ್ಪಡಿಸಲು ಹಾಗೂ ಸರ್ವಾಧಿಕಾರದ ವಿರುದ್ಧ ವಿಶಾಲ ತಳಹದಿಯ ಐಕ್ಯತೆ ಸಾಧಿಸಲು ಸಿ. ಪಿ. ಐ. (ಎಂ) ಆರಂಭಿಸಿರುವ ಹೋರಾಟ, ದೇಶದಲ್ಲಿ ಹಾಗೂ ವಿದೇಶಗಳಲ್ಲಿ ತೀವ್ರಗತಿಯಿಂದ ಹರಡುತ್ತಿರುವ ಸನ್ನಿವೇಶದಲ್ಲಿ ಅಗತ್ಯವಾದ ಮಟ್ಟದಲ್ಲಿಲ್ಲದಿದ್ದರೂ ಯಶಸ್ವಿಯಾಗುತ್ತಿದೆ ಎಂದು ನಿಯೋಗ ಚೀಣೀ ಸಂಗಾತಿಗಳಿಗೆ ತಿಳಿಸಿತು.

ಎರಡು ಪಕ್ಷಗಳ ನಡುವೆ ಸಂಬಂಧಗಳು ಅಮಾನತುಗೊಂಡ ದುರದೃಷ್ಟಕಾರಿ ಘಟನೆಗೆ ತಮ್ಮ ಪಕ್ಷ ಈ ಹಿಂದೆ ಅನುಸರಿಸಿದ ಎಡ ಧೋರಣೆಗಳು ಕಾರಣ; ಈ ಧೋರಣೆಗಳು ಪಕ್ಷ ಹಾಗೂ ಸರಕಾರದ ಆರ್ಥಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಎಲ್ಲಾ ಅಂಶಗಳಿಗೆ ತೊಂದರೆಯುಂಟು ಮಾಡಿವೆ ಎಂದು ಚೀಣೀ ನಿಯೋಗ ವಿವರಿಸಿತು. ತಮ್ಮ ಪಕ್ಷ ಈಗ ತೀವ್ರ ಸಂಕ್ಷೋಭೆಗಳ ಮೂಲಕ ಹಾದು ಈಗ ತಪ್ಪುಗಳನ್ನು ಸರಿಪಡಿಸುವ ಹಾದಿಯಲ್ಲಿದೆ ಎಂದೂ ಅವರು ತಿಳಿಸಿದರು. ಪಕ್ಷದ ಹನ್ನೆರಡನೇ ಅಧಿವೇಶನ ಹಾಗೂ ಅದಕ್ಕೆ ಸ್ವಲ್ಪ ಮೊದಲು ಕೇಂದ್ರ ಸಮಿತಿಯ ದಾಖಲೆಗಳೂ ವಿವರಿಸಿದಂತೆ ಪ್ರಮುಖ ಅಂತರ್‌ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪ್ರಶ್ನೆಗಳನ್ನು ಕುರಿತು ಪಕ್ಷ ತಳೆದ ನಿಲುವಿನ ಬಗ್ಗೆ ಒಂದು ವಿವರಣೆ ನೀಡಲಾಯಿತು.

ಎರಡೂ ನಿಯೋಗಗಳು ಅಂತರ್‌ರಾಷ್ಟ್ರೀಯ ಹಾಗೂ ರಾಷ್ಟ್ರೀಯ ಪ್ರಶ್ನೆಗಳನ್ನು ಕುರಿತಂತೆ ನೀಡಿದ ವಿವರಣೆಗಳಿಂದ ಸ್ಪಷ್ಟಪಡಿಸುವ ಅಂಶ ... ಈ ಮೊದಲು ಹೇಳಿದ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದಂತೆ "ಹಲವು ವಿಷಯಗಳ ಬಗ್ಗೆ ಒಮ್ಮತಕ್ಕೆ ಬಂದವು," ಜನರ ಕೆಲವು ವಿಷಯಗಳ ಬಗ್ಗೆ "ಭಿನ್ನ ದೃಷ್ಟಿ ಪ್ರಸ್ತುತಪಡಿಸಿದವು." ಆದರೂ "ಈ ಭಿನ್ನತೆ ಸಂಬಂಧಗಳನ್ನು ಮತ್ತೆ ಸ್ಥಾಪಿಸುವಲ್ಲಿ ಹಾಗೂ ವಿಸ್ತರಿಸುವಲ್ಲಿ ಅಡ್ಡಿ ಒಡ್ಡಲಾರವು" ಎಂಬ ಒಮ್ಮತಕ್ಕೂ ಬರಲಾಯಿತು.

ಸಿ. ಪಿ. ಐ (ಎಂ) ನಿಯೋಗ ಚೀಣಾ ಕಮ್ಯೂನಿಸ್ಟ್ ಪಕ್ಷದ ಪಾಲಿಟ್‌ಬ್ಯೂರೋ ಸದಸ್ಯ ಹಾಗೂ ಸಲಹಾ ಮಂಡಳಿಯ ಅಧ್ಯಕ್ಷ ಕಾಮ್ರೇಡ್ ಡೆಂಗ್ ತ್ಸ್ಯಾವೋ ಪಿಂಗ್ ಹಾಗೂ ರಾಷ್ಟ್ರೀಯ ಜನತಾ ಕಾಂಗ್ರೆಸ್‌ನ ಸ್ಥಾಯೀ ಸಮಿತಿಯ ಉಪಾಧ್ಯಕ್ಷ ಕಾಮ್ರೇಡ್ ಪೆಂಗ್‌ಶೆನ್‌ರೊಂದಿಗೂ ವಿಚಾರ ವಿನಿಮಯ ನಡೆಸಿತು. ಎರಡು ಪಕ್ಷಗಳ ನಡುವೆ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಇದು ಸಹಾಯಕವಾಯಿತು.

ಕೆಲವು ಪ್ರಮುಖ ಕೈಗಾರಿಕಾ ಸಂಸ್ಥೆಗಳು, ಸಹಕಾರಿ ಹಾಗೂ ಸರಕಾರೀ ಫಾರ್ಮ್‌ಗಳು, ವಿದ್ಯಾ ಸಂಸ್ಥೆಗಳು ಇತ್ಯಾದಿಗಳಿಗೆ ಭೇಟಿ ಕೊಡುವ ಅವಕಾಶ ನಿಯೋಗಕ್ಕೆ ದೊರಕಿತು. ಸಾಂಸ್ಕೃತಿಕ ಕ್ರಾಂತಿಯ ಅವಧಿಯಲ್ಲಿ ನಿಂತು ಹೋಗಿದ್ದ ಸಮಾಜವಾದಿ ರಚನೆಯ ಮುನ್ನಡೆಯನ್ನು ಹಾಗೂ ಪುನರಾರಂಭಿಸಿ ತೀವ್ರ ಗತಿಯಲ್ಲಿ ಹೇಗೆ ಅನುಸರಿಸಲಾಗುತ್ತಿದೆ ಎಂದು ಕಾಣುವಲ್ಲಿ ನಿಯೋಗದ ಸದಸ್ಯರಿಗೆ ಸಹಾಯಕವಾಯಿತು. ಪಾರ್ಟಿಯೊಳಗಣ ಪ್ರಜಾಪ್ರಭುತ್ವ ಹಾಗೂ ಸಮಾಜವಾದಿ ಕಾನೂನು ಬದ್ಧತೆಗೆ ಸಂಬಂಧಪಟ್ಟಂತೆ ಉಂಟಾಗಿದ್ದ ವಿಕೃತಿ ಹಾಗೂ ಅದನ್ನು ಹೋಗಲಾಡಿಸಲು ನಡೆದಿರುವ ಪ್ರಯತ್ನ ಎಲ್ಲೆಲ್ಲೂ ಎದ್ದು ಕಾಣುತ್ತಿತ್ತು.

ಪಾಲಿಟ್‌ಬ್ಯೂರೋ ಈ ಸಂದರ್ಭದಲ್ಲಿ ನಿಯೋಗಕ್ಕೆ ತೋರಿದ ಅದರ ಸ್ನೇಹಪೂರ್ಣ ವಿಚಾರ ವಿನಿಮಯ ಹಾಗೂ ಸಮಾಜವಾದೀ ರಚನೆಯಲ್ಲಿ ಸಾಧಿಸಿದ ಗಮನಾರ್ಹ ಪ್ರಗತಿಯನ್ನು ಕಾಣಲು ಅವಕಾಶ ಕಲ್ಪಿಸಿಕೊಟ್ಟುದ್ದಕ್ಕಾಗಿ ಚೀಣಾ ಕಮ್ಯೂನಿಸ್ಟ್ ಪಕ್ಷದ ಕೇಂದ್ರ ಸಮಿತಿಗೆ ಧನ್ಯವಾದ ವ್ಯಕ್ತಪಡಿಸುತ್ತದೆ. ಇವೆಲ್ಲಾ ಗತಕಾಲದ ಪೂರ್ವಾರ್ಜಿತವನ್ನು ಮೀರಿ ನಿಂತು ಎರಡೂ ಪಕ್ಷಗಳ ನಡುವಿನ ಸಂಬಂಧವನ್ನು ಮೊದಲಿನ ಹಂತಕ್ಕೆ ತರಬೇಕೆಂದು ಚೀಣೀ ಕಾಮ್ರೇಡ್‌ಗಳಲ್ಲಿರುವ ಅಪೇಕ್ಷೆಗೆ ಸಾಕ್ಷಿ. ಆದ್ದರಿಂದ ಈ ಎರಡು ಪಕ್ಷಗಳು ಪರಸ್ಪರ ಸತತ ಸಂಪರ್ಕ ಸಾಧಿಸಿಕೊಂಡು, ಜಾಗತಿಕ ಕಮ್ಯೂನಿಸ್ಟ್ ಚಳವಳಿಯಲ್ಲಿ ಮತ್ತೆ ಐಕ್ಯತೆ ಮೂಡಿಸುವ ಪ್ರಯತ್ನದಲ್ಲಿ ಜತೆ ಸೇರಲು, ಎರಡು ಪಕ್ಷಗಳ ಹಾಗೂ ಎರಡು ಜನತೆಗಳ ನಡುವಿನ ಸಂಬಂಧವನ್ನು ಸಾಮಾನ್ಯಗೊಳಿಸಲು ಸಾಧ್ಯವಾಗುತ್ತದೆಯೆಂದು ನಿಯೋಗ ಆಶಯ ವ್ಯಕ್ತಪಡಿಸುತ್ತದೆ. ★

ಕುಂದಾಪುರ :

ಮಹಿಳಾ ಸಂಘಟನೆಯಿಂದ ಮಕ್ಕಳ ದಿನಾಚರಣೆ-ವಿಚಾರಗೋಷ್ಠಿ

ಜೂನ್ ತಿಂಗಳ 1ನೇ ತಾರೀಖು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯು "ಮಕ್ಕಳ ದಿನ"ವನ್ನು ಆಚರಿಸುವ ದಿನ. ಈ ಕಾರ್ಯಕ್ರಮದ ಅಂಗವಾಗಿ 29-5-83ರಂದು ಕುಂದಾಪುರದಲ್ಲಿ AIDWAನ ತಾಲ್ಲೂಕು ಸಮಿತಿಯು ವಿಚಾರಗೋಷ್ಠಿಯೊಂದನ್ನು ಏರ್ಪಡಿಸಿತ್ತು. ಮೂರುವಿಷಯಗಳಿಗೆ ಸಂಬಂಧಪಟ್ಟಂತೆ ಗೋಷ್ಠಿಯಲ್ಲಿ ಪ್ರಬಂಧಗಳನ್ನು ಮಂಡಿಸಲಾಯಿತು.

ಯಶೋದಾ ಹಳಗೇರಿಯವರು "ಜಾಗತಿಕ ಶಾಂತಿ ಮತ್ತು ನಮ್ಮ ಮಕ್ಕಳು" ಎಂಬ ತಮ್ಮ ಪ್ರಬಂಧದಲ್ಲಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಯುದ್ಧ ಒಂದು ಅನಿವಾರ್ಯ ಹಾಗು ಸಾಮಾನ್ಯ ವಿಚಾರವಾಗಿದೆ. ಪ್ರಪಂಚದ ಯಾವುದೇ, ಮೂಲೆಯಲ್ಲೂ ರಾಷ್ಟ್ರಗಳೊಳಗೆ ಪರಸ್ಪರ ಯುದ್ಧ ನಡೆಯುತ್ತಿದ್ದರೆ, ಸಾಮ್ರಾಜ್ಯಶಾಹಿ ಶಕ್ತಿಗಳ ಶಸ್ತ್ರಾಸ್ತ್ರಗಳಿಗೆ ಮಾರ್ಕೆಟ್ ಸಿಗುತ್ತದಾದ್ದರಿಂದ ಇವರು ಯುದ್ಧವನ್ನು ಪ್ರಚೋದಿಸುತ್ತಲೇ ಇರುತ್ತಾರೆಂದರು. ಸಾಮಾಜಿಕ ಸೌಲಭ್ಯಗಳನ್ನು ಒದಗಿಸಬಹುದಾದ ಹಣವು ವ್ಯರ್ಥವಾಗುತ್ತದೆ. ಮಾರಕ ಯುದ್ಧಗಳ ನಂತರ ಹುಟ್ಟುವ ಮಕ್ಕಳು ಅನುಭವಿಸಬೇಕಾದ ದುಷ್ಪರಿಣಾಮಗಳನ್ನು ಸಭೆಗೆ ವಿವರಿಸಿದರು. ಇದರಿಂದ ಮುಖ್ಯವಾಗಿ ಮಕ್ಕಳು ತೊಂದರೆಯನ್ನನುಭವಿಸುವರು ಎಂದು ಹೇಳಿದ ಅವರು ಸಮಾಜದ ಸರ್ವತೋಮುಖ ಬೆಳವಣಿಗೆಗೆ ಶಾಂತಿಯು ಮಹತ್ವವಾದದ್ದು, ಸಮಾಜವಾದಿ ವ್ಯವಸ್ಥೆ ಮಾತ್ರವೇ ನಿಜವಾಗಿ ಶಾಂತಿಯುತವಾಗಿದೆಯೆಂದು ವಿವರಿಸಿದರು.

ವಿಮಲ ಅವರು "ವಿಶ್ವದ ವಿವಿಧ ಭಾಗಗಳಲ್ಲಿ ಮಕ್ಕಳ ಸ್ಥಿತಿಗತಿ" ಎಂಬ ತಮ್ಮ ಪ್ರಬಂಧದಲ್ಲಿ ಪ್ರಪಂಚದಲ್ಲಿ ಮುಖ್ಯವಾಗಿ ಬಂಡವಾಳಶಾಹಿ ಮತ್ತು ಸಮಾಜವಾದಿ ವ್ಯವಸ್ಥೆ ಅಸ್ತಿತ್ವದಲ್ಲಿದ್ದು, ಈ ಎರಡೂ ವ್ಯವಸ್ಥೆಗಳಲ್ಲಿರುವ ಮಕ್ಕಳ ಸ್ಥಿತಿಗತಿಯನ್ನು ವಿವರಿಸಿದರು. ಸಮಾಜವಾದಿ ವ್ಯವಸ್ಥೆಯಲ್ಲಿ ಗರ್ಭಿಣಿ ಸ್ತ್ರೀಯರಿಗೆ ಎಲ್ಲಾ ರೀತಿಯ ಸೂಕ್ತ ಸೌಲಭ್ಯಗಳನ್ನು ಒದಗಿಸುತ್ತಾರೆ. ಮಕ್ಕಳನ್ನು ಅಷ್ಟೇ ಕಾಳಜಿಯಿಂದ ಪೋಷಿಸಿ, ಬಾಲಕರಿಗಿಷ್ಟವಾದ ಕ್ಷೇತ್ರದಲ್ಲಿ ಶಿಕ್ಷಣ, ಉದ್ಯೋಗಾವಕಾಶಗಳನ್ನು ನೀಡುತ್ತಾರೆಂದು ಅವರು ತಿಳಿಸಿದರು. ಮಕ್ಕಳ ಪಾಲನೆ ಪೋಷಣೆ, ಶಿಕ್ಷಣದಲ್ಲಿ ಪೋಷಕರೊಂದಿಗೆ ಸರಕಾರವೂ ಮಹತ್ವದ ಪಾತ್ರ ವಹಿಸುತ್ತದೆ. ಆದರೆ ಇನ್ನೊಂದು ಕಡೆಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಕ್ಕಳ ಸ್ಥಿತಿ ಹೇಗಿದೆಯೆಂದು ತಿಳಿಸಲು ನಮ್ಮ ದೇಶದ ಉದಾಹರಣೆ ಮೂಲಕ ವಿವರಿಸಿದರು. ಬಾಲಕರ ಮರಣ ಸಂಖ್ಯೆಯಲ್ಲಿ ಭಾರತ ಎರಡನೇ ಸ್ಥಾನ ಗಳಿಸಿದೆ. ದೇಶದ ಮಕ್ಕಳ ಸಂಖ್ಯೆಯಲ್ಲಿ ಶೇಕಡ ಐದಕ್ಕೂ ಹೆಚ್ಚು ಮಂದಿ ತಮ್ಮ ತಾಯಿ ತಂದೆಯರಿಗೆ ಸಹಾಯಕರಾಗಲು, ಹೊಟ್ಟೆ ಹೊರೆಯುವ ಉದ್ದೇಶದಿಂದಾಗಿ ದುಡಿಮೆ ಮಾಡುತ್ತಾರೆ. ಸಮಾರು ಅಷ್ಟೇ ಅಂಗವಿಕಲ ಮಕ್ಕಳು ಭಿಕ್ಷೆ ಬೇಡುತ್ತಾರೆ ಎಂದು ತಿಳಿಸಿದ ಅವರು ಶಾಲೆಗೆ ಹೋಗದಿರುವ ಮಕ್ಕಳು, ಮಧ್ಯದಲ್ಲೇ ಶಾಲೆ ಬಿಡುತ್ತಿರುವ ಮಕ್ಕಳು ಹೀಗೆ ಇನ್ನೂ ಹಲವಾರು ಮಕ್ಕಳು ಅನುಭವಿಸುತ್ತಿರುವ ವಿಚಾರಗಳನ್ನು ವಿವರಿಸಿ, ಜನರ ಬಡತನವೆ ಇದಕ್ಕೆ ಮುಖ್ಯ ಕಾರಣವಾಗಿದೆ; ಸಮಾಜವಾದಿ ದೇಶಗಳಲ್ಲಿ ಮಾತ್ರ ಇಂಥ ಧಾರುಣ ಪರಿಸ್ಥಿತಿಯಿಲ್ಲ ಎಂದರು.

ಗಾಯಿತ್ರಿ ವಿ. ನಾವಡರು "ಮುಂದಿನ ಜನಾಂಗದ ನಿರ್ಮಾಣದಲ್ಲಿ ತಾಯಂದಿರ ಪಾತ್ರ" ವಿಷಯವಾಗಿ ಪ್ರಬಂಧ ಮಂಡಿಸಿದರು. ಒಂದು ಮಗುವು ಒಬ್ಬ ಉತ್ತಮ ಪ್ರಜೆಯಾಗಬೇಕಾದರೆ, ಅದು ಅವರನ್ನು ಪೋಷಿಸುವ ತಾಯಿಯ ಕೈಯಲ್ಲಿದ್ದು, ಇದರತ್ತ ತಾಯಂದಿರು ಕೈಗೊಳ್ಳಬೇಕಾದ ಮಾರ್ಗಗಳನ್ನು, ಸೂಚಿಸಿದರು. ಮಕ್ಕಳಲ್ಲಿ ಹುದುಗಿರುವ ಆಸಕ್ತಿಯನ್ನು ಅರಿತು, ಅದರ ಸಂಪೂರ್ಣ ವಿಕಾಸಕ್ಕಾಗಿ ತಕ್ಕ ವಾತಾವರಣವನ್ನು ಕಲ್ಪಿಸಬೇಕು. ಮಕ್ಕಳು ಕುತೂಹಲರಾಗಿ ಪ್ರಶ್ನೆ ಕೇಳುವ ಹವ್ಯಾಸಕ್ಕೆ ತಣ್ಣೀರೆರಚದೆ, ಸೂಕ್ತವಾಗಿ ಉತ್ತರಿಸಬೇಕು. ಯಾವುದೇ ವಿಷಯಗಳನ್ನು ಕಾಗಕ್ಕ, ಗುಬ್ಬಕ್ಕ ಕತೆಯಾಗಿಯಲ್ಲದೆ ವೈಜ್ಞಾನಿಕವಾಗಿ ಉತ್ತರಿಸಬೇಕು. ಇಲ್ಲದಿದ್ದರೆ ಮಕ್ಕಳು ಅವೈಜ್ಞಾನಿಕ ತಿಳುವಳಿಕೆಯನ್ನೇ ಹೊಂದುತ್ತಾರೆ. ಮಕ್ಕಳಲ್ಲಿ ಶ್ರಮ ಗೌರವ ಮೂಡಿಸುವಂತೆಯೂ ಪ್ರಯತ್ನಿಸಬೇಕು ಎಂದವರು ವಿವರಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ AIDWA ರಾಜ್ಯ ಸಮಿತಿಯ ಅಧ್ಯಕ್ಷೆ ದೇವಕಿ ವಾರಿಯರ್‌ರವರು ಮಹಿಳೆ ಯಾವ ರೀತಿಯಲ್ಲಿ ತೀವ್ರ ಶೋಷಿತಳಾಗಿದ್ದಾಳೆಯೋ ಅದರಂತೆ ಮಕ್ಕಳೂ ಕೂಡ ತೀವ್ರ ಶೋಷಣೆಗೊಳಗಾಗಿದ್ದಾರೆ. ಇದಕ್ಕೆ ಮೂಲಭೂತ ಕಾರಣ ನಮ್ಮ ಜನತೆಯ ಕಡು ಬಡತನವಾಗಿದೆ. ಅಜ್ಞಾನ, ಬಡತನದ ತೀವ್ರತೆಯಿಂದಾಗಿ ಹೆಣ್ಣು ಮಕ್ಕಳ ವೇಶ್ಯಾವಾಟಿಕೆಯ ಅನಿಷ್ಟ ಪದ್ಧತಿ ಅಲ್ಲಲ್ಲಿ ನಡೆಯುತ್ತಿದೆ. ಇಂಥ ದುಷ್ಟ ಪರಿಸ್ಥಿತಿ ನಿರ್ಮಾಣವಾಗುವಂತೆ ತೀವ್ರ ಹೋರಾಟ ಮಾಡುವ ಅವಶ್ಯಕತೆಯಿದೆ ಎಂದು ಅವರೆಂದರು. ಹೆಚ್ಚಿನಾಂಶದ ಜನಸಂಖ್ಯೆ ಬಡತನದ ಬೇಗುದಿಯಲ್ಲಿ ಬೇಯುತ್ತಿರುವುದರಿಂದ ಮಧ್ಯಮ ವರ್ಗದವರೂ ಸೇರಿದಂತೆ ಮಕ್ಕಳತ್ತ ಕಾಳಜಿ ವಹಿಸುವುದು ಸಾಧ್ಯವಾಗುತ್ತಿಲ್ಲವೆಂದ ಅವರು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಈ ಸಮಸ್ಯೆಗೆ ಪರಿಹಾರವಿಲ್ಲವೆಂದರು. ವರದಕ್ಷಿಣೆ, ಜಾತೀಯತೆ, ಅಸ್ಪೃಶ್ಯತೆ ಇತ್ಯಾದಿ ಸಾಮಾಜಿಕ ಆರ್ಥಿಕ ಸಮಸ್ಯೆಗಳೆಲ್ಲಾ ಕಡಿಮೆಯಾಗಬೇಕಾದರೆ ಪ್ರಗತಿಪರ ಮನೋಭಾವವುಳ್ಳ ಮಹಿಳಾ ಚಳವಳಿ ತೀರ ಅವಶ್ಯವಾಗಿದ್ದು ದೇಶದಲ್ಲಿ ವಿಚ್ಛಿದ್ರಕಾರಿ ಶಕ್ತಿಗಳು ಕೆಲಸ ಮಾಡುತ್ತಿದ್ದು, ಅಂತಹ ಶಕ್ತಿಗಳನ್ನು ಸೋಲಿಸುವುದು ಅಗತ್ಯವಾಗಿದೆಯೆಂದು ಒತ್ತಿ ಹೇಳಿದರು.

ಸಭೆಯ ಅಧ್ಯಕ್ಷತೆಯನ್ನು ಕುಮಾರಿ ವಸಂತಿಯವರು ವಹಿಸಿದ್ದರು. ಪ್ರಾರಂಭದಲ್ಲಿ ಕುಮಾರಿ ಉತ್ಕಲ ಸ್ವಾಗತಿಸಿದರು. ಕೊನೆಯಲ್ಲಿ "ಕುಂದಾಪುರ ಸಮುದಾಯ"ದವರು ಮಕ್ಕಳ ನಾಟಕವನ್ನು ಪ್ರದರ್ಶಿಸಿದರು.

15-6-83ರಂದು ಸರಕಾರಿ ಜಾಗದಲ್ಲಿ ವಾಸಿಸುವ ಬಡ ಜನರ ಸಮ್ಮೇಳನ

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ಮತ್ತು ಬೆಳ್ತಂಗಡಿ ತಾಲ್ಲೂಕುಗಳಲ್ಲಿ ಸರ್ಕಾರಿ ಭೂಮಿಯಲ್ಲಿ ವಾಸಿಸುತ್ತಿರುವ ಸಹಸ್ರಾರು ಬಡ ಕುಟುಂಬಗಳ ಮತ್ತು ಬಡ ರೈತ ಹಾಗೂ ಕೃಷಿ ಕೂಲಿಗಾರರ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ಕಾರ್ಯಕ್ರಮವನ್ನು ರೂಪಿಸಿಕೊಳ್ಳಲು ಕಾ। ಎಂ. ಕೆ. ಭಟ್ ಅವರ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟಿರುವ 30 ಮಂದಿಯ ಹೋರಾಟ ಸಮಿತಿಯ ಸಭೆಯು ದಿನಾಂಕ 19-5-83ರಂದು ಪುತ್ತೂರಿನಲ್ಲಿ ಸೇರಿತ್ತು. ಕರ್ನಾಟಕ ಪ್ರಾಂತ ರೈತ ಸಂಘವು ರಾಜ್ಯದ ಮುಖ್ಯಮಂತ್ರಿಯವರಿಗೆ ಮಾರ್ಚ್ 3ರಂದು ಕೊಟ್ಟಿರುವ ಮನವಿ ಪತ್ರದಲ್ಲಿ ಮೊದಲ ಬೇಡಿಕೆಯು ಸರ್ಕಾರಿ ಭೂಮಿಯಲ್ಲಿ ವಾಸಿಸುವ ಅಥವಾ ಕೃಷಿ ಮಾಡುತ್ತಿರುವ ಎಲ್ಲಾ ಬಡ ಜನರಿಗೆ ಕೂಡಲೇ ಧರ್ಮಾರ್ಥವಾಗಿ ಭೂಮಿಯನ್ನು ಖಾಯಂಗೊಳಿಸಿ ಹಕ್ಕು ಪತ್ರ ಒದಗಿಸಿ ಕೊಡಬೇಕೆಂಬುದೇ ಆಗಿತ್ತು. ಮನವಿ ಕೊಟ್ಟು ಮೂರು ತಿಂಗಳುಗಳಾಗುತ್ತಾ ಬಂದರೂ ಬೇಡಿಕೆಯನ್ನು ಈಡೇರಿಸುವುದರ ಬಗ್ಗೆ ಸರಕಾರದಿಂದ ಚಕಾರ ಶಬ್ದವಿಲ್ಲ. ಮಾತ್ರವಲ್ಲ, ಸರಕಾರಿ ಭೂಮಿಯಲ್ಲಿ ಕುಳಿತಿರುವ ಬಡ ಜನರನ್ನು ಬಲಾತ್ಕಾರದಿಂದ ಭೂಮಿಯಿಂದ ಬಿಡಿಸುವುದಕ್ಕೆ ಡೆವಿನ್ಯೂ ಇಲಾಖೆಯವರು ಕ್ರಮ ತೆಗೆದುಕೊಳ್ಳುತ್ತಲಿದ್ದಾರೆ. ಆದುದರಿಂದ ಬೇಡಿಕೆ ಈಡೇರುವ ತನಕ ಹೋರಾಟ ನಡೆಸದೆ ಬೇರೆ ದಾರಿ ಇಲ್ಲ ಎಂದು ಸಮಿತಿಯು ಅಭಿಪ್ರಾಯಪಟ್ಟಿತು.

ಜನವರಿ ಪ್ರಾರಂಭದಲ್ಲಿ ರಾಜ್ಯದಲ್ಲಿ ಜನತಾ ಪಕ್ಷವು ಅಧಿಕಾರ ಸ್ವೀಕರಿಸುವ ದಿನದವರೆಗೆ ಸರ್ಕಾರಿ ಭೂಮಿಯಲ್ಲಿ ಆಗಮೆ ಮಾಡಿರುವ ಎಲ್ಲಾ ಬಡಜನರಿಗೆ ಭೂಮಿಯ ಹಕ್ಕು ಧರ್ಮಾರ್ಥ ದೊರೆಯುವಂತೆ ಆಗುವತನಕ ದೀರ್ಘ ಕಾಲದ ಹೋರಾಟ ನಡೆಸಬೇಕಾಗಬಹುದೆಂದು ಅಭಿಪ್ರಾಯಪಟ್ಟ ಸಮಿತಿಯು ಕಾರ್ಯಕ್ರಮ ರೂಪಿಸಲು ದಿನಾಂಕ 15–6–83ರಂದು ಪುತ್ತೂರಿನಲ್ಲಿ ಮೂರು ತಾಲ್ಲೂಕುಗಳಲ್ಲಿ ಸರಕಾರಿ ಭೂಮಿಯಲ್ಲಿರುವ ಬಡ ಜನರ ಸಮ್ಮೇಳನ ನಡೆಸಲು ತೀರ್ಮಾನಿಸಿತು. ಸುಮಾರು ಐನೂರಕ್ಕೂ ಮೇಲ್ಪಟ್ಟು ಪ್ರತಿನಿಧಿಗಳು ಭಾಗವಹಿಸಲಿರುವ ಈ ಸಮ್ಮೇಳನದಲ್ಲಿ ಸಿ. ಪಿ. ಐ. (ಎಂ) ರಾಜ್ಯ ಕಾರ್ಯದರ್ಶಿ ಮತ್ತು ರೈತ ಸಂಘದ ರಾಜ್ಯ ಸಮಿತಿ ಅಧ್ಯಕ್ಷ ಹಾಗೂ ಶಾಸಕ ಕಾ। ಪಿ. ರಾಮಚಂದ್ರರಾವ್ ಮತ್ತು ಇನ್ನಿತರ ಮುಂದಾಳುಗಳೂ ಭಾಗವಹಿಸಲಿರುವರು. ಹಂತ ಹಂತವಾಗಿ ಹೋರಾಟ ನಡೆಸುವ ಯೋಜನೆ ಹಾಕಲಿರುವ ಈ ಸಮ್ಮೇಳನವು ಪುತ್ತೂರಿನಲ್ಲಿ ಎನ್. ಜಿ. ಓ. ಭವನದಲ್ಲಿ ಸೇರುವುದು. ಸಮ್ಮೇಳನದ ಕೊನೆಗೆ ಮೆರವಣಿಗೆಯಲ್ಲಿ ಹೋಗಿ ಅಸಿಸ್ಟೆಂಟ್ ಕಮಿಷನರ್‌ರವರ ಮೂಲಕ ಮುಖ್ಯಮಂತ್ರಿಯವರಿಗೆ ಮತ್ತೊಮ್ಮೆ ಕೊನೆಯದಾಗಿ ಮನವಿಯನ್ನು ಕೊಡಲಾಗುವುದು. ಈ ಪ್ರದೇಶದಲ್ಲಿ ಹೋರಾಟ ನಡೆಸಿ ಪರಿಹಾರ ದೊರಕಿಸಿಕೊಳ್ಳಲು ತೆಗೆದುಕೊಂಡಿರುವ ಸರಕಾರಿ ಭೂಮಿಯಲ್ಲಿ ವಾಸಿಸುವವರ ಪ್ರಶ್ನೆಯು ಇಡೀ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ, ರಾಜ್ಯದಲ್ಲೂ ಇರುವ ದೊಡ್ಡ ಪ್ರಶ್ನೆಯಾಗಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮತ್ತು ರಾಜ್ಯದಾದ್ಯಂತ ಸೌಹಾರ್ದ ಬೆಂಬಲ ಕೊಡಲು ಸಮಿತಿಯ ಅಧ್ಯಕ್ಷ ಕಾ। ಎಂ. ಕೆ.ಯವರು ವಿನಂತಿಸಿಕೊಂಡಿದ್ದಾರೆ.

ಸಿ.ಐ.ಟಿ.ಯು. ಸ್ಥಾಪನಾ ದಿನಾಚರಣೆ

ದಿನಾಂಕ 30-5-1983ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ಎನ್. ಜಿ. ಓ. ಹಾಲ್‌ನಲ್ಲಿ ಸಿ.ಐ.ಟಿ.ಯು.ನ 13ನೇ ಸ್ಥಾಪನಾ ದಿನವನ್ನು ಆಚರಿಸಲಾಯಿತು.

ಸಭೆಯ ಅಧ್ಯಕ್ಷತೆಯನ್ನು ಸಿ. ಐ. ಟಿ. ಯು. ಅಧ್ಯಕ್ಷರಾದ ಕಾ. ಎಸ್. ಸೂರ್ಯನಾರಾಯಣರಾವ್ ಅವರು ವಹಿಸಿದ್ದರು.

ಸಿ. ಐ. ಟಿ. ಯು.ನ ಕರ್ನಾಟಕ ರಾಜ್ಯ ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾ. ಸಿ. ನಂಜುಂಡಪ್ಪ ಅವರು ಸಿ. ಐ. ಟಿ. ಯು, ಸ್ಥಾಪನೆಯ ಹಿನ್ನೆಲೆ, ಸಿ. ಐ. ಟಿ. ಯು. ಬೆಳೆದು ಬಂದ ದಾರಿ, ದೇಶದ ಕಾರ್ಮಿಕ ವರ್ಗದ ಚಳುವಳಿಯಲ್ಲಿ ಅದು ವಹಿಸಿದ ಪಾತ್ರ, ಅಖಿಲ ಭಾರತ ಮಟ್ಟದಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಅದು ನಡೆಸಿದ, ನಡೆಸುತ್ತಿರುವ ಹೋರಾಟಗಳು ಮುಂತಾದವುಗಳನ್ನು ಕುರಿತು ಸವಿಸ್ತಾರವಾಗಿ ವಿವರಿಸಿದರು.

ಸಿ. ಪಿ. ಐ. (ಎಂ)ನ ರಾಜ್ಯ ಕಾರ್ಯದರ್ಶಿ ಹಾಗೂ ಶಾಸಕರಾದ ಕಾ। ಪಿ. ರಾಮಚಂದ್ರರಾವ್ ಅವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾ। ಎಸ್. ಸೂರ್ಯನಾರಾಯಣರಾವ್ ಅವರು ಕಾರ್ಮಿಕ ವರ್ಗದ ಮುಂದಿರುವ ಕರ್ತವ್ಯವನ್ನು ಕುರಿತು ಮಾತನಾಡಿದರು.

ಮಾನವನ ಭವಿಷ್ಯ

(4ನೇ ಪುಟದಿಂದ)

ನಿರ್ವಹಣೆ ಮಾಡುವ, ಮೊದಲು ಹೇಳಿದ ವೃತ್ತಿನಿರತರೂ ಕೂಡಾ, ಈ ವರ್ಗಕ್ಕೇ ಸೇರಿದವರು.

ಈ ಹೊಸ ವ್ಯವಸ್ಥೆಯಲ್ಲಿ ಉತ್ಪಾದನೆಯ ಎಲ್ಲ ಉಪಕರಣಗಳೂ ಅಂದರೆ ಫ್ಯಾಕ್ಟರಿಗಳು, ಕಚ್ಚಾ ಪದಾರ್ಥಗಳು, ಕೃಷಿ ಭೂಮಿ, ಕೃಷಿ ಉಪಕರಣಗಳು, ನೀರಾವರಿ ಎಲ್ಲವೂ ಒಟ್ಟು ಜನತೆಯ ಸ್ವಾಮ್ಯದಲ್ಲಿರುತ್ತವೆ. ಈಗ ಅವೆಲ್ಲವೂ ಕೆಲವೇ ಜನರ ಆಸ್ತಿ. ಸಮಾಜವಾದದಲ್ಲಿ ಅವು ಜನತೆಯ ಆಸ್ತಿ.

ಈ ಸನ್ನಿವೇಶದಲ್ಲಿ ಶ್ರಮದ ಲಾಭವನ್ನು ಕೆಲವೇ ಜನ ಕಸಿದುಕೊಳ್ಳಲಾರರು. ಎಲ್ಲರೂ ತಮ್ಮ ತಮ್ಮ ದುಡಿಮೆಗೆ ಅನುಗುಣವಾಗಿ, ದುಡಿಮೆಯ ಫಲವನ್ನು ಹಂಚಿಕೊಳ್ಳುವರು. ಈಗ, ದುಡಿಮೆ, ಕೆಲವರ ಲಾಭಕೋಸ್ಕರ ಮಾತ್ರ ಮೀಸಲಾಗಿರದೆ, ಇದೇ ಸಮಾಜದ ಸರ್ವಾಂಗೀಣ ಅಭಿವೃದ್ಧಿಗೋಸ್ಕರ ವಿನಿಯೋಗವಾಗುವುದು.

ಸಮಾಜವಾದವೆಂದರೆ ಸರ್ವಾಧಿಕಾರವಲ್ಲ. ಅದು ನಿಜಕ್ಕೂ ಪ್ರಜಾಪ್ರಭುತ್ವದ ತತ್ವಗಳ ಶ್ರೇಷ್ಠತಮ ಅಭಿವ್ಯಕ್ತಿ.

ಇಡೀ ಜಗತ್ತಿನಲ್ಲಿ ಸಮಾಜವಾದ ನೆಲೆಗೊಂಡಾಗ, ಮಾನವನ ಅತ್ಯಂತ ಸುಂದರ ಕನಸು ಒಂದು ಸಾಕಾರರೂಪ ತಳೆದಿರುತ್ತದೆ.

ಆ ಹೊಸ ಸಮಾಜದಲ್ಲಿ ಯಾರೂ "ಪ್ರಾಮಾಣಿಕತೆ"ಯ ಬಗ್ಗೆ ವಿಶೇಷ ಒತ್ತುಕೊಟ್ಟು ಮಾತಾಡಲಾರರು. "ಅಪ್ರಾಮಾಣಿಕತೆ"ಯಿಂದ ಗಳಿಸಬಹುದಾದ ಲಾಭವೇನೂ, ಈ ಹೊಸ ಸಮಾಜದಲ್ಲಿ ಇರುವುದಿಲ್ಲ. ಈ ಹೊಸ ಸಮಾಜದಲ್ಲಿ ಗಂಡು ಮತ್ತು ಹೆಣ್ಣು ಇಬ್ಬರಿಗೂ ಸಾಮಾಜಿಕ ಜವಾಬ್ದಾರಿಗಳಲ್ಲಿ ಸಮಾನವಾದ ಹೊಣೆಗಾರಿಕೆ ಇರುತ್ತದೆ. ಆದ್ದರಿಂದ ಗಂಡು ಮೇಲು, ಹೆಣ್ಣು ಕೀಳು ಎಂಬ ಭಾವನೆಗೆ ಅವಕಾಶವೇ ಇರುವುದಿಲ್ಲ. ಈ ಹೊಸ ಸಮಾಜದಲ್ಲಿ ಮತ್ಸರಕ್ಕೆ ಎಡೆ ಇಲ್ಲ. ಯಾಕೆಂದರೆ ಖಾಸಗೀ ಆಸ್ತಿಯೇ ನಾಶವಾದ ಪರಿಸ್ಥಿತಿಯಲ್ಲಿ ಒಬ್ಬ ಇನ್ನೊಬ್ಬನ ಬಗ್ಗೆ ಯಾವ ಕಾರಣಕ್ಕೆ ಮತ್ಸರಪಡಬೇಕು ? ಸ್ವಂತ ಆಸ್ತಿ, ಸ್ವಂತ ಭೂಮಿ, ಸ್ವಂತದ ದುಡ್ಡು ಇತ್ಯಾದಿ ಕಲ್ಪನೆಗಳೇ ನಾಶಗೊಂಡ ಪರಿಸ್ಥಿತಿಯಲ್ಲಿ ಒಬ್ಬ ಮನುಷ್ಯ ಇನ್ನೊಬ್ಬನನ್ನು ದ್ವೇಷಿಸುವ ಕಾರಣಗಳೂ ನಾಶಗೊಳ್ಳುತ್ತವೆ; ಮನುಷ್ಯರಲ್ಲಿ ಪರಸ್ಪರ ಭ್ರಾತೃತ್ವಭಾವ ಸಹಜವಾಗಿಯೇ ನೆಲೆಗೊಳ್ಳುತ್ತದೆ.

ಇದು ಮಾನವನ ಭವಿಷ್ಯ. ●

ಸಿ.ಪಿ.ಐ. (ಎಂ) ಕೇಂದ್ರ ಸಮಿತಿಯ ನಿರ್ಣಯಗಳು

(3ನೇ ಪುಟದಿಂದ)

ಕೆಲಸ ಮಾಡುತ್ತಿರುವರೆಂಬುದಕ್ಕೆ ಸಾಕಷ್ಟು ಸಾಕ್ಷ್ಯಗಳಿವೆ.

ಅಭೂತಪೂರ್ವ ಗಂಡಾಂತರವನ್ನು ಎದುರಿಸುತ್ತಿರುವ ಪಂಜಾಬಿನ ಪರಿಸ್ಥಿತಿಯ ಬಗ್ಗೆ ಕೇಂದ್ರ ಸಮಿತಿಯು ತೀವ್ರ ಕಳವಳವನ್ನು ವ್ಯಕ್ತಪಡಿಸುತ್ತದೆ. ಅಕಾಲಿಗಳ ನಡುವಣ ಉಗ್ರಗಾಮಿಗಳು ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಮತೀಯ ಸೌಹಾರ್ದತೆ ಮತ್ತು ಶಾಂತಿ ಸಮಾಧಾನಗಳನ್ನು ಕೆಡಿಸುವ ಸಾಧ್ಯತೆ ಇದೆ.

ಉಗ್ರಗಾಮಿಗಳು ಹರಡುತ್ತಿರುವ ಹಿಂಸಾಚಾರವನ್ನು ಖಂಡಿಸಿ ಪಂಜಾಬಿ ಜನತೆಯ ಐಕ್ಯತೆಯನ್ನು ಕಾಪಾಡಲು ಸಹಾಯಕವಾಗಬೇಕೆಂದು ಅಕಾಲಿ ಮುಖಂಡತ್ವಕ್ಕೆ ಕೇಂದ್ರ ಸಮಿತಿಯು ಮನವಿ ಮಾಡುತ್ತದೆ. ಇದನ್ನು ಮಾಡಲು ವಿಫಲವಾದಲ್ಲಿ ಅವರು ತಮ್ಮ ಸ್ಥಾನವನ್ನು ರಾಜಿ ಮಾಡಿಕೊಂಡಂತಾಗುತ್ತದೆ. ಅವರ ಧಾರ್ಮಿಕ ಬೇಡಿಕೆಗಳು ಈಗ ಈಡೇರಿರುವುದರಿಂದ ಪಂಜಾಬಿ ಜನರ ನ್ಯಾಯವಾದ ಬೇಡಿಕೆಗಳನ್ನು ಪಡೆದುಕೊಳ್ಳುವುದಕ್ಕಾಗಿ ಅವರು ಇತರ ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಸೇರಿ ಪ್ರಯತ್ನಿಸಬೇಕು. ಆಗ ಮಾತ್ರವೇ ಅವರು ದೇಶದ ಪ್ರಜಾಪ್ರಭುತ್ವ ಚಳುವಳಿಯ ಸಹಾನುಭೂತಿ ಮತ್ತು ಬೆಂಬಲಗಳನ್ನು ಗಳಿಸಬಲ್ಲರು.

ತ್ರಿಪಕ್ಷೀಯ ಸಮ್ಮೇಳನದಲ್ಲಿ ಒಂದು ವಿಶಾಲ ಒಪ್ಪಂದಕ್ಕೆ ಬರುವುದರಲ್ಲಿದ್ದು ಕೆಲವು ಸಣ್ಣ ಅಂಶಗಳು ಮಾತ್ರ ಬಗೆಹರಿಸಲು ಉಳಿದಿದ್ದುವು ಎಂದು ಕೇಂದ್ರ ಸಮಿತಿಯು ಭಾವಿಸುತ್ತದೆ. ಕೇಂದ್ರ ರಾಜ್ಯಗಳ ಸಂಬಂಧಗಳನ್ನು ಪುನರ್ ಪರೀಕ್ಷಿಸುವ ಬೇಡಿಕೆ ಸರ್ಕಾರಿಯಾ ಆಯೋಗದ ನೇಮಕದ ಮೂಲಕ ಈಡೇರಿದ್ದು ನೀರಿನ ಮತ್ತು ಪ್ರದೇಶದ ವಿವಾದಗಳಿಗೆ ಪರಿಹಾರ ಕಾಣುವುದು ಕಷ್ಟವೇನಲ್ಲ. ಆದ್ದರಿಂದ ಕೇಂದ್ರ ಸರ್ಕಾರವು ಕೂಡಲೇ ಪಂಜಾಬಿನ ಬಗ್ಗೆ ತ್ರಿಪಕ್ಷೀಯ ಮಾತುಕತೆಗಳನ್ನು ಏರ್ಪಡಿಸಬೇಕೆಂದು ಅದರಲ್ಲಿ ಭಾಗವಹಿಸಲು ಅಕಾಲಿ ಮುಖಂಡತ್ವಕ್ಕೆ ಆಮಂತ್ರಣ ಕೊಡಬೇಕೆಂದು ಕೇಂದ್ರ ಸಮಿತಿಯು ಅಗ್ರಹಪಡಿಸುತ್ತದೆ. ಇನ್ನು ವಿಳಂಬ ಮಾಡಿದರೆ ಹಾನಿಯುಂಟಾದೀತು.

ಸಾಮ್ರಾಜ್ಯಶಾಹಿ ವಿರೋಧಿ ಮತ್ತು ರಾಷ್ಟ್ರೀಯ ಐಕ್ಯತೆಗಳ ಸಂಪ್ರದಾಯಗಳಿಗೆ ಬದ್ಧರಾದ ಪಂಜಾಬಿನ ಜನರು ಐಕ್ಯತೆಯನ್ನು ಉಳಿಸಿಕೊಂಡು ಎರಡೂ ಬಗೆಯ ಉಗ್ರಗಾಮಿಗಳ ವಿರುದ್ಧ ಹೋರಾಡಬೇಕೆಂದು ಕೇಂದ್ರ ಸಮಿತಿಯು ಪಂಜಾಬಿನ ಜನತೆಗೆ ಮನವಿ ಮಾಡುತ್ತದೆ. ಜನತೆಯ ಐಕ್ಯತೆಯನ್ನು ಒಡೆಯುವ ಯಾವುದೇ ಪ್ರಯತ್ನ ಪ್ರತಿಗಾಮಿ ಶಕ್ತಿಗಳಿಗೆ ಮತ್ತು ವಿದೇಶಿ ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಸಹಾಯಕವಾಗುತ್ತದೆ.

ಅಮ್ಮಾವರೊಬ್ಬರೇ ಸಾಕ್ಷಿ

ಕರ್ನಾಟಕದ ಕಾಂಗ್ರೆಸ್ಸಿನಲ್ಲಿ ಬಹಿರಂಗವಾಗಿಯೂ ಅಂತರಂಗದಲ್ಲೂ ನಡೆದಿರುವ ಕಚ್ಚಾಟಗಳ ಕುರಿತು ಕಾಂಗ್ರೆ ಕುರಿಗಳನ್ನು ಪ್ರಶ್ನಿಸಿದಾಗ ಹೊರ ಬಂದ ಉದ್ಗಾರವೇನೆಂದರೆ, ಅವರಿವರು ನಮಗೇನು ಮಾಡ್ಯಾರಿ. ನಮಗೆ ಅಮ್ಮಾವರೊಬ್ಬರಿದ್ದರೇ ಸಾಕ್ರಿ.

ಕಾಂಗ್ರೆಸ್ ಪಕ್ಷದ ರಾಷ್ಟ್ರಮಟ್ಟದ, ರಾಜ್ಯಮಟ್ಟದ, ಜಿಲ್ಲಾ ಮಟ್ಟದ ಚುನಾವಣೆಗಳೇ ನಡೆದಿಲ್ಲ. ಹೋದ ವರ್ಷ ನವೆಂಬರ್ ತಿಂಗಳೊಳಗಾಗಿ ಚುನಾವಣೆ ನಡೆಸಲಾಗುವುದೆಂದು ಸಾರಲಾಗಿತ್ತು. ಆದರೆ ಮೂರು ರಾಜ್ಯಗಳಲ್ಲಿಯ ಚುನಾವಣೆ ನೆವ ಮುಂದೆ ಮಾಡಿ ಚುನಾವಣೆಯನ್ನು ಗಾಳಿಯಲ್ಲಿ ತೂರಲಾಯಿತು. ಕರ್ನಾಟಕದಲ್ಲಿ ಟೆಂಪರವರಿ ಮಲ್ಲಣ್ಣನವರೇ ಖಾಯಂ ಅಧ್ಯಕ್ಷರಾಗಿದ್ದಾರೆ. ಜನವರಿಯಲ್ಲಿ ಆದ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆ ಸೋಲನ್ನನುಭವಿಸಿದ ನಂತರ ಖಾಯಂ ಅಧ್ಯಕ್ಷರಿಗಾಗಿ ಅನ್ವೇಷಣೆ ಒಂದೇ ಸವನೆ ನಡೆದಿದೆ. ಗುಂಡೂರಾಯರಿಗೆ ಧರ್ಮಸಿಂಗ್ ಬೇಕಾಗಿದ್ದಾರೆ. ಮೊಯಿಲಿಯವರಿಗೆ ತಾನೇ ಅಧ್ಯಕ್ಷನಾಗಬೇಕೆಂಬಾಸೆ. ಮೊಯಿಲಿಯವರನ್ನು ವಿಧಾನಸಭೆಯ ಕಾಂಗ್ರೆಸ್ ಪಕ್ಷ ಮುಖಂಡತ್ವದಿಂದ ಇಳಿಸುವ ಪ್ರಯತ್ನ ನಡೆದಿದೆ. ಮೊಯಿಲಿ, ಗುಂಡೂರಾವ್ ಹಾಗೆಯೇ ಮಲ್ಲಣ್ಣ ಅವರೆಲ್ಲ ದಿಲ್ಲಿ ಯಾತ್ರೆ ಮಾಡುತ್ತಲೇ ಇದ್ದಾರೆ. ದೇವಿಯ ದರ್ಶನ ಪಡೆಯುತ್ತಲೇ ಇದ್ದಾರೆ. ಆದರೆ ದಿಲ್ಲಿಯ ಮಹಾಮಾಯಿ ಇವರ ಪ್ರಾರ್ಥನೆ ಪೂಜಾದಿಗಳಿಗೆ ಇನ್ನೂ ಒಲಿದಿಲ್ಲ. ದಿವ್ಯಜ್ಯೋತಿಯ ದರ್ಶನಕ್ಕಾಗಿ, ಅದರಿಂದ ಹೊರ ಬೀಳತಕ್ಕ ಒಂದು ಶಬ್ದಕ್ಕಾಗಿ ಕಾತರದಿಂದ ಕಾಯುತ್ತಿದ್ದಾರೆ. ಗುಂಡೂರಾವ್, ಮೊಯಿಲಿಯವರು, ಕೆಳಮಟ್ಟದ ಕಾಂಗ್ರೆಸ್ ಜನರಿಗೆ ಮೇಲ್ಮಟ್ಟದ ಚಿಂತೆ ಅರ್ಥವಾಗುತ್ತಲೇ ಇಲ್ಲ. "ಅಮ್ಮಾವರಿಂದ ಈ ಜನ ಬದುಕಿದ್ದಾರೆ. ಯಾರು ಅಧ್ಯಕ್ಷರಾದರೇನಂತೆ ಇಂದಿರಮ್ಮನ ಆಶೀರ್ವಾದ ಹಸ್ತ ಒಂದಿದ್ದರೆ ಸಾಕು ನಮಗೆ" ಎಂದೇ ಇವರ ಕೂಗು. ಆದರೆ ಮೊಯಿಲಿ, ಗುಂಡೂರಾಯರು ರಾಜಕಾರಣದಲ್ಲಿ ಮುಳುಗೇಳಿದವರಲ್ಲವೇ, ಇಂದಲ್ಲ, ನಾಳೆಯಾದರೂ ಅಧಿಕಾರ ಒಲಿದೇ ಒಲಿಯುತ್ತಾಳೆ. ಆಗ ಮುಖ್ಯಮಂತ್ರಿ ಸ್ಥಾನ ಗಿಟ್ಟಿಸಬೇಕಾದರೆ "ತನ್ನವ" ಕೆ. ಪಿ. ಸಿ. ಸಿ.ಯ ಅಧ್ಯಕ್ಷನಾಗಿರುವುದು ಅತ್ಯಗತ್ಯ. "ಈ ರಾಜಕಾರಣ ಸಾದಾ ಭಕ್ತರಿಗೆಲ್ಲ ಎಲ್ಲಿ ಅರ್ಥವಾಗುತ್ತದೆ. ಅವರೆಲ್ಲ ಅಮ್ಮಾವ್ರ ಹೆಸರಿಗೆ ಮರುಳಾದ ಜನ. ರಾಜ್ಯದ ಬಿ.ಜೆ.ಪಿ.ಯಂತೆಯೇ ಕಾಂಗ್ರೆ ಪಕ್ಷದಲ್ಲಿ ಆಂತರಿಕ ಜಗಳ, ವ್ಯಕ್ತಿ ದ್ವೇಷ, ಗುಂಪುಗಾರಿಕೆಗಳಿಲ್ಲ, ಆಳವಾಗಿ ಮೂಡಿವೆ. ಇದರ ಲಾಭ ಪಡೆದು ತಮ್ಮ ಬಲ ಸಂವರ್ಧಿಸಲು ಜನತಾ ಪಕ್ಷ ಒಳಗಿಂದೊಳಗೆ 'ಕೋಚಿಶ್' ನಡೆಸಿದರೆಂಬ ಸುದ್ದಿ ಕೇಳಿ ಬರುತ್ತಿದೆ. ಈ ಸುದ್ದಿ ಕಾಂಗ್ರೆಸಿಗರಲ್ಲಿರುವ ಜಗಳ ಶಾವಿಗೆಗೆ ಚಿಮಿಣಿ ಎಣ್ಣೆ ಸುರುವಿದಂತಾಗಿದೆ. ಇದರಿಂದಾಗಿ ರಾಜ್ಯದ ರಾಜಕೀಯದಲ್ಲಿ ಯಾವ ತರದ ಬದಲಾವಣೆಯಾಗುತ್ತದೆ ಎಂಬುದನ್ನು ನೋಡೋಣ.

REG KRNU-188 MAG (2) PRB DECR 319/78-79 ಜೂನ್ 12, 1983

ಪಶ್ಚಿಮ ಬಂಗಾಲ ಜನತೆಗೆ ಪೊಲಿಟ್ ಬ್ಯೂರೋ ಅಭಿನಂದನೆ

ಜೂನ್ 1, 2 ರಂದು ಕಲ್ಕತ್ತದಲ್ಲಿ ಸೇರಿದ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಪೊಲಿಟ್ ಬ್ಯೂರೋ ಪಶ್ಚಿಮ ಬಂಗಾಲದಲ್ಲಿ ನಡೆದ ಪಂಚಾಯತ್ ಚುನಾವಣೆಯಲ್ಲಿ ಎಡರಂಗದ ಮೇಲೆ ಮತ್ತೊಮ್ಮೆ ವಿಶ್ವಾಸ ಪ್ರದರ್ಶಿಸಿದ್ದಕ್ಕಾಗಿ ಹಾಗೆಯೇ ಸಿ. ಪಿ. ಐ. (ಎಂ) ನೇತೃತ್ವದ ಎಡರಂಗ ಸರಕಾರದ ಆರು ವರ್ಷಗಳ ಆಡಳಿತೆಗೆ ತಮ್ಮ ಸಂಪೂರ್ಣ ಬೆಂಬಲವಿದೆಯೆಂದು ತೋರಿಸಿದ್ದಕ್ಕಾಗಿ ಪಶ್ಚಿಮ ಬಂಗಾಲದ ಜನತೆಗೆ ಅಭಿನಂದನೆಗಳನ್ನು ಸಲ್ಲಿಸಿದೆ. ಗುತ್ತೇದಾರಿ ಬಂಡವಾಳದಾರರ ಪತ್ರಿಕೆಗಳೂ, ಕಾಂಗ್ರೆ ಮತ್ತು ಅವರ ಬೆಂಬಲಿಗರೆಲ್ಲ ಎಡರಂಗ ಸರಕಾರಕ್ಕೆ ಕೆಟ್ಟ ಹೆಸರು ತರುವುದರ ಸಲುವಾಗಿ ಏನೆಲ್ಲ ಪ್ರಚಾರ ಮಾಡಿದರೂ, ಅದನ್ನೆದುರಿಸಲು ಎಡರಂಗ ಏನೆಲ್ಲ ಕಷ್ಟಗಳನ್ನೆದುರಿಸಬೇಕಾಯಿತೆಂಬ ಸಂಗತಿ ಪಿ. ಬಿ ಗೆ ತಿಳಿದಿದೆ.

ಇಂಥ ಕಷ್ಟಗಳನ್ನೆದುರಿಸಿ ಒಂದು ವರ್ಷದೊಳಗಾಗಿಯೇ ಕಾಂಗ್ರೆಗೆ ಎರಡನೇ ಸೋಲನ್ನುಂಟು ಮಾಡಿದ್ದಕ್ಕಾಗಿ ಪಿ. ಬಿ. ಯು ಸಿ. ಪಿ. ಐ. (ಎಂ) ನ ಕಾರ್ಯಕರ್ತರನ್ನು ಅಭಿನಂದಿಸುತ್ತದೆ. ಕಾಂಗ್ರೆಯ ಆಕ್ರಮಣವನ್ನು ಎದುರಿಸುವ ಸಲುವಾಗಿ ಬೇಕಾದ ಐಕ್ಯತೆ ಹಾಗೂ ಸಮನ್ವಯತೆಯನ್ನು ಎಡರಂಗ ತೋರ್ಪಡಿಸಿಲ್ಲೆಂಬುದನ್ನು ಗಮನಿಸುತ್ತದೆ. ಈ ರೀತಿಯ ಕೊರತೆ ಇಲ್ಲದಿದ್ದ ಪಕ್ಷದಲ್ಲಿ ಎಡರಂಗದ ವಿಜಯ ಇನ್ನೂ ಹೆಚ್ಚು ಪರಿಣಾಮಕಾರಿಯಾಗುತ್ತಿತ್ತು. ಪ. ಬಂಗಾಲದ ರಾಜ್ಯ ಸಮಿತಿ ಹಾಗೂ ಎಲ್ಲಾ ಸಂಗಾತಿಗಳು ಒಗ್ಗಟ್ಟು ಮತ್ತು ಸಮನ್ವಯತೆಯನ್ನು ಕಾಪಾಡಲು ಸರ್ವ ಪ್ರಯತ್ನ ಮಾಡಿದ್ದಾರೆಂದು ಸಮಾಧಾನ ವ್ಯಕ್ತಪಡಿಸುತ್ತದೆ. ಆದರೆ ಎಡರಂಗದ ಕೆಲವು ಘಟಕಗಳು ವಾಸ್ತವಿಕತೆಯನ್ನು ಮೀರಿ ಬೇಡಿಕೆ ಮುಂಡಿಸಿದ್ದರಿಂದ, ಇವರೆಲ್ಲರ ಪ್ರಯತ್ನ ವಿಫಲವಾಯಿತೆಂಬುದನ್ನೂ ಮನಿಸುತ್ತದೆ. ಸಂಬಂಧ ಪಟ್ಟ ಪ್ರತಿಯೊಬ್ಬರೂ ಈ ಅನುಭವದಿಂದ ಸರಿಯಾದ ಪಾಠ ಕಲಿಯುತ್ತಾರೆಂದು ಆಶಿಸುತ್ತದೆ.

14 ವಿರೋಧ ಪಕ್ಷಗಳ ಮುಖಂಡರು ಮೇ 28ರಂದು ವಿಜಯವಾಡದಲ್ಲಿ ಸೇರಿ, ನಡೆಸಿದ ಚಟುವಟಿಕೆಗಳ ವಿವರವನ್ನು ಕಾ| ಬಸವ ಪುನ್ನಯ್ಯನವರಿಂದ ಕೇಳಿಕೊಂಡು, ಸೈದ್ಧಾಂತಿಕ ಮತ್ತು ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ ಕೂಡ ಸಭೆಯಲ್ಲಿ ಭಾಗವಹಿಸಿದವರೆಲ್ಲ ದೇಶದ ಐಕ್ಯತೆಗೆ ಇಂದು ಅತಿ ಹೆಚ್ಚಿನ ಗಂಡಾಂತರ ಉಂಟಾಗಿದೆಂದೂ ಜನರ ಸಮಸ್ಯೆಗಳಿಗೆ ಸಕಾಲದಲ್ಲಿ ಪರಿಹಾರ ಕಂಡು ಹಿಡಿಯುವಲ್ಲಿ ಇಂದಿರಾ ಸರಕಾರ ವಿಫಲಗೊಂಡಿರುವುದರಿಂದಲೇ ದೇಶದ ಐಕ್ಯತೆಗೆ, ಸಮಗ್ರತೆಗೆ ಅಪಾಯ ಉಂಟಾಗಿದೆಂಬ ಒಮ್ಮತದ ಅಭಿಪ್ರಾಯಕ್ಕೆ ಬಂದಿರುವುದು ಸ್ವಾಗತಾರ್ಹ.

ಕೇಂದ್ರ–ರಾಜ್ಯಗಳ ಸಂಬಂಧದ ಕುರಿತು ಪುನರ್ವಿಮರ್ಶೆ ಆಗಬೇಕೆಂದೂ, ಸರ್ಕಾರಿಯ ಕಮಿಶನಿನ ಅಧಿಕಾರಾವಧಿ ವಿಶಾಲಗೊಳ್ಳಬೇಕೆಂದೂ ಕೇಳಿಕೊಂಡಿರುವುದು ಯೋಗ್ಯವಾಗಿದೆ. ರಾಷ್ಟ್ರ ಎದುರಿಸುತ್ತಿರುವ ಮೇಲಿನ ತುರ್ತು ಸಮಸ್ಯೆಗಳ ಕುರಿತು ಗಮನ ಹರಿಸುವುದಲ್ಲದೆ, ತಂತಮ್ಮೊಳಗೆ ವಿಚಾರ ವಿನಿಮಯ ಮುಂದುವರಿಸಬೇಕೆಂದು ನಿರ್ಧರಿಸಿರುವುದನ್ನು ಪಿ. ಬಿ. ಸ್ವಾಗತಿಸಿ, ಈ ಸಮಸ್ಯೆಗಳ ಕುರಿತು ಜನಾಭಿಪ್ರಾಯ ಉಂಟು ಮಾಡಬೇಕೆಂದೂ ಕೇಳಿಕೊಂಡಿತು.

ಅಸ್ಸಾಂನಲ್ಲಿ ಅನಿಶ್ಚಿತ ಪರಿಸ್ಥಿತಿ ಮುಂದುವರಿಯುತ್ತಿರುವುದನ್ನೂ, ಸಿ. ಪಿ. ಐ. (ಎಂ) ಮತ್ತು ಇತರ ವಿರೋಧ ಪಕ್ಷದ ಕಾರ್ಯಕರ್ತರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಹೆಚ್ಚಾಗುತ್ತಿದೆ. ಸಾವಿರಾರು ಜನ ಮನೆ–ಮಠ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಪ. ಬಂಗಾಲದಲ್ಲಿ 38000 ನಿರಾಶ್ರಿತರಿದ್ದಾರೆ. ಈ ರೀತಿಯ ದಬ್ಬಾಳಿಕೆಯನ್ನು ನಿಲ್ಲಿಸಲು, ನಿರಾಶ್ರಿತರೆಲ್ಲ ವಾಪಸ್ಸಾಗಿ ಜೀವನ ನಡೆಸಲು ಅನುಕೂಲವಾಗುವಂತ ಪರಿಸ್ಥಿತಿ ಉಂಟು ಮಾಡಬೇಕೆಂದು ಪಿ. ಬಿ. ಕೇಳಿಕೊಳ್ಳುತ್ತದೆ.

ನಾಲ್ಕು ಎಡ ಪಕ್ಷಗಳಾದ ಸಿ. ಪಿ. ಐ. (ಎಂ), ಸಿ. ಪಿ. ಐ. ಆರ್. ಎಸ್. ಪಿ. ಫಾರ್ವರ್ಡ್ ಬ್ಲಾಕ್ ಪುರೋಗಾಮಿ ಪಕ್ಷಗಳು ಜೊತೆಯಾಗಿ ಅಸ್ಸಾಮಿನ ಗಂಭೀರ ಪರಿಸ್ಥಿತಿಯ ಕುರಿತು ಹಾಗೆಯೇ ಇದರಿಂದ ದೇಶದ ಐಕ್ಯತೆಗೆ ಉಂಟಾಗಬಹುದಾದ ಅಪಾಯದ ಕುರಿತು ದೇಶದ ಜನತೆ ಎಚ್ಚರದಿಂದಿರಬೇಕೆಂದು ಮಾಡಿಕೊಂಡ ಮನವಿಯನ್ನು ಪ್ರಶಂಸಿಸಿದೆ. ಎಲ್ಲ ಪಾರ್ಟಿ ಘಟಕಗಳು ನಾಲ್ಕು ಪಕ್ಷಗಳ ಹೇಳಿಕೆಗನುಸಾರವಾಗಿ ದೇಶಾದ್ಯಂತ ಸಂಯುಕ್ತ ಪ್ರಚಾರ ಪ್ರಕ್ಷೋಭೆ ಮಾಡಬೇಕೆಂದು ಕೇಳಿಕೊಳ್ಳುತ್ತದೆ.

ಅಕಾಲಿ ಮುಖಂಡರ ಜೊತೆಯಲ್ಲಿ ಚರ್ಚೆ ಮಾಡಿ ಪಂಜಾಬಿನ ಸಮಸ್ಯೆ ಬಗೆಹರಿಸಲು ಸಾಧ್ಯತೆಗಳಿದ್ದರೂ ಕೂಡ ಆಳುವ ಪಕ್ಷ ಅದನ್ನು ಉಪಯೋಗ ಮಾಡಿಕೊಳ್ಳದಿರುವುದಕ್ಕೆ ಕೇಂದ್ರ ಸರ್ಕಾರವನ್ನು ಖಂಡಿಸಿ ಒಪ್ಪಂದಕ್ಕೆ ಬರಲು ಎಲ್ಲ ಸರಿಯಾದ ಕ್ರಮ ಕೈಗೊಳ್ಳಬೇಕೆಂದು ಆಶಿಸುತ್ತದೆ.

ಅಂತರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಪಡೆದ ಸಾಲದ ಕುರಿತು ಆರ್ಥಿಕ ತಜ್ಞರ ಸಮಿತಿ ಸಲ್ಲಿಸಿದ ವರದಿಯಲ್ಲಿ ಈ ಸಾಲದಿಂದ ಉಂಟಾಗಬಹುದಾದ ಅಪಾಯವನ್ನು ವಿವರಿಸಿ ಹೇಳಿ ಈ ಸಾಲದ ಮರು ಪಾವತಿಗಾಗಿ ಇನ್ನೂ ಹೆಚ್ಚಿಗೆ ವಿದೇಶಿ ಸಾಲ ಪಡೆಯಬೇಕಾಗುತ್ತದೆ ಎಂದು, ಅದರಿಂದಾಗಿ ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ ಹೆಚ್ಚಿನ ಕೆಟ್ಟ ಪರಿಣಾಮ ಉಂಟಾಗುವುದೆಂದೂ ಹೇಳಿರುವುದನ್ನೂ ಜನರಲ್ಲಿ ಪ್ರಚಾರ ಮಾಡಿ, ಇದರಿಂದ ಉಂಟಾಗಬಹುದಾದ ಅಪಾಯದ ವಿರುದ್ಧ ಸಂಯುಕ್ತ ಹೋರಾಟ ನಡೆಸಬೇಕೆಂದು ಪಿ. ಬಿ. ಕರೆ ನೀಡಿದೆ.

ಮಹತ್ವದ ಹೆಜ್ಜೆ

(ಒಂದನೇ ಪುಟದಿಂದ)

ನೀತಿ ಹದಗೆಡಲಿಕ್ಕೆ ಆಳುವ ಪಕ್ಷವೇ ಮುಖ್ಯ ಕಾರಣ.

ಪ್ರಜಾಪ್ರಭುತ್ವದ ಮೂಲ ಘಟಕಗಳ ನಾಶವಾಗುತ್ತಿರುವುದು ಬಹಳ ಗಂಭೀರ ವಿಷಯವಾಗಿದೆ. ಚುನಾವಣಾ ಕಮಿಷನ್ನಿನ ಸ್ವಾಯತ್ತತೆಯ ಕುರಿತು ಸಂಶಯ ವ್ಯಕ್ತಮಾಡಬೇಕಾಗುತ್ತದೆ.

ಕೇಂದ್ರ–ರಾಜ್ಯ ಸಂಬಂಧಗಳ ಕುರಿತು ಪುನರ್ವಿಮರ್ಶೆಯಾಗುವುದು ಅತ್ಯಗತ್ಯ. ಸರ್ಕಾರಿಯಾ ಕಮಿಶನನ್ನು ವಿಶಾಲಗೊಳಿಸಬೇಕು. ರಾಜ್ಯ ಸರಕಾರಗಳು ಹಾಗೆಯೇ ಲೋಕಸಭೆಯ ವಿರೋಧ ಪಕ್ಷಗಳೊಡನೆ ಸಮಾಲೋಚಿಸಿಯೇ ಈ ಕಮಿಶನಿನ ಅಧಿಕಾರ ವ್ಯಾಪ್ತಿ ನಿರ್ಧರಿಸಲ್ಪಡಬೇಕು.

ಅಧಿಕಾರದ ವಿಕೇಂದ್ರೀಕರಣದಿಂದಾಗಲೀ, ಫೆಡರಲಿಸಂನ ವಿಚಾರದಿಂದಾಗಲೀ ದೇಶದ ಐಕ್ಯತೆಗೆ ಅಪಾಯವಿಲ್ಲೆಂದೂ, ಆ ಕಾರಣದಿಂದಾಗಿ ಒಬ್ಬರಿಗೊಬ್ಬರು ಯಾರೂ ವಿರೋಧಿಸುವ ಕಾರಣವಿಲ್ಲೆಂದು ಅಭಿಪ್ರಾಯಪಡುತ್ತದೆ.

ದೇಶದ ಸಂವಿಧಾನಕ್ಕೆ ವಿರುದ್ಧವಾಗಿ ಕೇಂದ್ರವು ರಾಜ್ಯಗಳ ಅಧಿಕಾರ ವ್ಯಾಪ್ತಿಯಲ್ಲಿ ಅತಿಕ್ರಮಣ ಮಾಡುತ್ತಿದೆ. ತಡವಿಲ್ಲದೆ ಇದನ್ನು ವಿರೋಧಿಸಲೇಬೇಕು. ಇಂಥ ವಿಚಾರ ವಿನಿಮಯ ಮುಂದುವರಿಯಬೇಕು.

ದೇಶದ ಐಕ್ಯತೆಯನ್ನು ಕಾಪಾಡಲು ಜನತೆ ಎಂಥ ತ್ಯಾಗಕ್ಕಾದರೂ ಮುಂದಾಗಬೇಕು.

ವಿಜಯವಾಡ ಸಮಾವೇಶದ ನಂತರ ಪ್ರಕಟಿಸಲ್ಪಟ್ಟ ಎಲ್ಲ ವಿರೋಧ ಪಕ್ಷಗಳ ಈ ಮಹಾ ಆಶಯವನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಏಕ ವ್ಯಕ್ತಿ ಸರ್ವಾಧಿಕಾರದ ವಿರುದ್ಧ ಹೋರಾಟದಲ್ಲಿ ವಿಜಯವಾಡದ ಸಮಾಲೋಚನೆ ಮುನ್ನಡೆಯ ಹೆಜ್ಜೆಯಾಗಲೆಂದು ಹಾರೈಸೋಣ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿಯ ಪಾಲಿಟ್ ಬ್ಯೂರೋ ವಿಜಯವಾಡಾ ಸಮಾವೇಶದ ನಿರ್ಣಯಗಳನ್ನು ಸ್ವಾಗತಿಸಿ, ದೇಶದ ಇಂದಿನ ಪರಿಸ್ಥಿತಿಯಲ್ಲಿ ಅದು ಒಳ್ಳೆಯ ಪರಿಣಾಮ ಬೀರುತ್ತದೆಂಬ ಆಶಯ ವ್ಯಕ್ತ ಮಾಡಿದೆ.

ಡಿ. ವೈ. ಎಫ್. ಐ ಸಂಗಾತಿಗಳ ಗಮನಕ್ಕೆ

ದಿನಾಂಕ 4–6–83ರಂದು ಬೆಂಗಳೂರಿನಲ್ಲಿ ರಾಜ್ಯದ ಮುಖ್ಯ ಕಾರ್ಯಕರ್ತರ ಸಭೆಯು ಸಂಸತ್ ಸದಸ್ಯ ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಕಾ| ಹನನ್ ಮುಲ್ಲಾ ಅವರ ಸಮ್ಮುಖದಲ್ಲಿ ನಡೆಯಿತು. ಕಾರ್ಯದರ್ಶಿಗಳು ರಾಜ್ಯದ ಸಂಘಟನಾ ಪರಿಸ್ಥಿತಿಯನ್ನು ವಿವರಿಸಿ ಸಂಘಟನಾ ಸಮಿತಿಯನ್ನು ರಚಿಸಿ ರಾಜ್ಯ ಸಂಚಾಲಕರನ್ನಾಗಿ ಕಾ| ಎಸ್. ಶಿವರಾಂ ಅವರನ್ನು ಆಯ್ಕೆ ಮಾಡಲಾಗಿದೆ. ರಾಜ್ಯ ಸಂಘಟನಾ ಸಮಿತಿಯಲ್ಲಿ 15 ಜನರಿರುತ್ತಾರೆ. ವಿವರಗಳು ಸುತ್ತೋಲೆಯ ಮುಖಾಂತರ ತಮ್ಮ ಕೈ ಸೇರುತ್ತದೆ.

ಸಂಘಟನಾ ಸಮಿತಿಯು ಕೆಲವು ನಿರ್ಣಯಗಳನ್ನು ತೆಗೆದುಕೊಂಡಿದೆ. ಆ ರೀತಿ ಜಿಲ್ಲಾ, ತಾಲ್ಲೂಕ್ ಹಾಗೂ ಏರಿಯಾ ಸಮಿತಿಗಳು ಕಾರ್ಯಾರಂಭ ಮಾಡಬೇಕು.

ಕೇಂದ್ರ ಡಿ. ವೈ. ಎಫ್. ಐ. ಕರೆಯ ಮೇರೆಗೆ ಜೂನ್ 20. 1983ರಂದು ಪೋಸ್ಟರ್ಸ್, ಕರಪತ್ರ, ಗೋಡೆ ಬರಹ, ಸೆಮಿನಾರ್ಸ್ ಮೂಲಕ ರಾಷ್ಟ್ರೀಯ ಐಕ್ಯತಾ ದಿನಾಚರಣೆಯನ್ನು ಆಚರಿಸಬೇಕು.

ಜುಲೈ ತಿಂಗಳಿನಿಂದ ಸೆಪ್ಟೆಂಬರ್ ತಿಂಗಳವರೆವಿಗೆ ಸದಸ್ಯತ್ವವನ್ನು ಸೊಂದಾಯಿಸಬೇಕು. ಸದಸ್ಯತ್ವದ ಆಧಾರದಲ್ಲಿ ಈ ವರ್ಷ ಡಿಸೆಂಬರ್ ತಿಂಗಳಿನಲ್ಲಿ ರಾಜ್ಯ ಸಮ್ಮೇಳನ ನಡೆಸಲಾಗುವುದು. ನಿಮ್ಮ ಸದಸ್ಯತ್ವದ ಕೋಟಾವನ್ನು ಸೂಚಿಸಿ ಈ ಕೆಳಕಂಡ ಸಂಚಾಲಕರಿಗೆ ಪತ್ರ ಬರೆಯಬೇಕು.

ಎಸ್. ಶಿವರಾಂ, ಸಂಚಾಲಕ
ಡಿ. ವೈ. ಎಫ್. ಐ. ರಾಜ್ಯ ಸಂಘಟನಾ ಸಮಿತಿ

ಬಿ. ಡಿ. ಕೆ. ಮತ್ತು ಸುಂದತ್ರಾ ಕಾರ್ಮಿಕರ ಹೋರಾಟಕ್ಕೆ ಬೆಂಬಲ

ಏಪ್ರಿಲ್ 27ರಿಂದ ಜೀವನಾವಶ್ಯಕ ಕನಿಷ್ಠ ಕೂಲಿಗಾಗಿ ಮುಷ್ಕರಕ್ಕಿಳಿದಿರುವ ಬಿ.ಡಿ.ಕೆ. ಅಲಾಯ್ಸ್ ಕಾರ್ಮಿಕರಿಗೆ ಹಾಗೂ 21 ಕಾರ್ಮಿಕರ ಸಸ್ಪೆನ್ಷನ್ ವಿರುದ್ಧ ಹೋರಾಡುತ್ತಿರುವ ಸುಂದತ್ರಾ ಕಾರ್ಮಿಕರಿಗೆ ಬೆಂಬಲ ಪ್ರದರ್ಶಿಸುವುದಕ್ಕಾಗಿ ಮೇ 28ರಂದು ಸಿ. ಐ. ಟಿ. ಯು. ನೇತೃತ್ವದ ಜಂಟೀ ಕ್ರಿಯಾ ಸಮಿತಿಯ ಕರೆಯ ಮೇರೆಗೆ ಸುಮಾರು 2,000 ಕಾರ್ಮಿಕರು ಬೃಹತ್ ಮೆರವಣಿಗೆ ಹೊರಡಿಸಿದರು. ಭಾರಿ ಮಳೆ, ಗುಡುಗು, ಸಿಡಿಲುಗಳಿದ್ದರೂ ಗೋಕುಲ ಕ್ರಾಸ್‌ದಿಂದ ಪ್ರಾರಂಭಗೊಂಡ ಈ ಮೆರವಣಿಗೆಯು ಹುಬ್ಬಳ್ಳಿಯ ಮಹತ್ವದ ಬೀದಿಗಳಲ್ಲೆಲ್ಲಾ ಸುತ್ತಿ ಕೊನೆಯಲ್ಲಿ ಈದಗಾ ಮೈದಾನದಲ್ಲಿ ಬಹಿರಂಗ ರ್‍ಯಾಲಿಯಾಗಿ ಮಾರ್ಪಟ್ಟಿತು. ವಿಶೇಷವೆಂದರೆ ಧಾರವಾಡದಿಂದ ಇಂಡಿಯನ್ ಪ್ಲೈವುಡ್‌ನ ಐವತ್ತು ಕಾರ್ಮಿಕರು ಸೈಕಲ್ ಮೇಲೆ ಬಂದು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಆಕರ್ಷಕ ಕೈಫಲಕಗಳು, ಸಿ. ಐ. ಟಿ. ಯು. ಧ್ವಜ ಹಾಗೂ ಬ್ಯಾನರುಗಳು ಅಲ್ಲದೇ ಬಿ. ಡಿ. ಕೆ. ಮತ್ತು ಸುಂದತ್ರಾ ಕಾರ್ಮಿಕರ ಹೋರಾಟಗಳಿಗೆ ಬೆಂಬಲ ಸೂಚಿಸುವ ಹಲವು ವಿನೂತನ ಘೋಷಣೆಗಳಿಂದ ಮೆರವಣಿಗೆಯು ಹುಬ್ಬಳ್ಳಿಯ ಸಾರ್ವಜನಿಕರ ಗಮನ ಸೆಳೆಯಿತು. ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದ ಕಾ| ವ್ಹಿ ಏ. ಹಳಕಟ್ಟಿಯವರು ಈ ಎರಡು ಹೋರಾಟಗಳ ಸೋಲು ಗೆಲುವುಗಳು ಮಹಾನಗರದ ಕಾರ್ಮಿಕ ಚಳುವಳಿಯ ಮೇಲೆ ತುಂಬಾ ಪ್ರಭಾವ ಬೀರಬಲ್ಲವೆಂದು ನುಡಿದರು. ಐಕ್ಯ ಹೋರಾಟಗಳ ಪರಂಪರೆ ಮಹಾನಗರದಲ್ಲಿ ಇಲ್ಲದೇ ಇರುವುದು ಹಾಗೂ ಇದುವರೆಗಿನ ಕಾರ್ಮಿಕ ಚಳುವಳಿಯಲ್ಲಿನ ಪರಿಷ್ಕರಣವಾದ, ವ್ಯಕ್ತಿವಾದ, ಭ್ರಷ್ಟಾಚಾರ ಮುಂತಾದ ನ್ಯೂನತೆಗಳ ಹಿನ್ನೆಲೆಯಲ್ಲಿ ಜಂಟೀ ಕ್ರಿಯಾ ಸಮಿತಿಯ ಸ್ಥಾಪನೆ ಒಂದು ಮಹತ್ವದ ಹೊಸ ಅಧ್ಯಾಯವನ್ನು ಪ್ರಾರಂಭಿಸಿದೆ ಎಂದು ಅವರು ನುಡಿದರು. ಇಂಡಿಯನ್ ಪ್ಲೈವುಡ್‌ನ ಕಾ| ಎಂ. ಬಿ. ಕಟ್ಟಿ, ಸುಂದತ್ರಾ ಸಂಘದ ಕಾ| ನಾಯುಡು, ವಿಮಾ ನೌಕರರ ಸಂಘದ ಕಾ| ಆಯಿ, ಟೈವಾರ್ ಸಂಘದ ಕಾ| ಅಣ್ಣಿಗೇರಿ, ಮೈಸೂರು ಕಿರ್ಲೋಸ್ಕರ್‌ನ ಕಾ| ವೈ. ಎಸ್. ಕುಲಕರ್ಣಿ, ಡಿ. ವೈ. ಎಫ್. ಐ.ನ ಕಾ| ವೈ. ಮಠ್ ಮೋಪೆಕ್ಸ್ ಸಂಘದ ಕಾ| ಸುಧೀಂದ್ರ ಹೀಗೆ ಹಲವಾರು ಸಂಗಾತಿಗಳು ಮಾತನಾಡಿ ಎರಡೂ ಹೋರಾಟಗಳಿಗೆ ಬೆಂಬಲ ಸೂಚಿಸಿದರು.

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560053. Editorial and managerial office : L-56, K. V. Temple Street, Sultanpet, B-53. Phone : 2415
Printed at Karnataka Pressmen Associates (P) Limited, 54/1, K. R. Road, Bangalore-4 Editor: P. RAMACHANDRA RAO